# ಬೃಹಚ್ಚರಣ

**ಸಂಪಾದಕ ಸಮಿತಿ**

| | |
|---|---|
| ಶ್ರೀ ಎಸ್. ಸೋಮಸುಂದರ | ಪ್ರಧಾನ ಸಂಪಾದಕ |
| ಶ್ರೀ ವಿ. ಎಸ್. ಮಣಿ | ಸದಸ್ಯರು |
| ಶ್ರೀ ಶ್ರೀನಿವಾಸ್ ಎಸ್.ಸಿ. | ಸದಸ್ಯರು |
| ಶ್ರೀಮತಿ ಲಲಿತ ರಮೇಶ | ಸದಸ್ಯರು |
| ಶ್ರೀ ಕೆ.ಸಿ. ನಟರಾಜನ್ | ಸಂಪಾದಕ |

ಸಂಪುಟ : 7 ಸಂಚಿಕೆ : 4 ತ್ರೈಮಾಸಿಕ ವಾರ್ತಾ ಪತ್ರ ಖಾಸಗಿ ಪ್ರಸಾರಕ್ಕಾಗಿ ಅಕ್ಟೋಬರ್–ಡಿಸೆಂಬರ್ 2017


## ಸುಭಾಷಿತ

ಬದುಕೆಂಬ ಪಯಣದಲ್ಲಿ ಅನೇಕ ಜನರು ಜೊತೆಯಾಗುತ್ತಾರೆ. ಕೆಲವರು ಪ್ರೀತಿಸುತ್ತಾರೆ, ಕೆಲವರು ಪರೀಕ್ಷಿಸುತ್ತಾರೆ. ಕೆಲವರು ಆಶೀರ್ವದಿಸುತ್ತಾರೆ. ಇನ್ನೂ ಕೆಲವರು ಬೆಂಬಲವಾಗಿ ನಿಲ್ಲುತ್ತಾರೆ. ಕೆಲವರು ಕಾರಣವಿಲ್ಲದೇ ಬಿಟ್ಟು ಹೋಗುತ್ತಾರೆ. ಆದರೆ ತಾಳ್ಮೆಯುತ ಬದುಕು ನಮ್ಮದಾಗಲಿ. ಯಾಕೆಂದರೆ ಇಲ್ಲಿ 'ಕಾರಣವಿಲ್ಲದೇ ಯಾವ ಕಾರ್ಯವೂ ಸಾಗದು'.

## ಅಧ್ಯಕ್ಷರ ನುಡಿ

ಆತ್ಮೀಯ ಬಂಧುಗಳೇ ನಮಸ್ಕಾರ.

ಮುಂಬರುವ 2018ನೇ ಇಸವಿಯು ತಮ್ಮೆಲ್ಲರಿಗೂ ಶುಭ ತರಲೆಂದು, ಮಕರ ಸಂಕ್ರಾಂತಿ, ಗಣರಾಜ್ಯೋತ್ಸವ, ಮಹಾ ಶಿವರಾತ್ರಿಯು ಸಮುದಾಯದ ಬಾಂಧವರಿಗೆಲ್ಲಾ ಸಮೃದ್ಧಿ ನೀಡಲಿ ಎಂದು ಕಾರ್ಯಕಾರಿ ಸಮಿತಿ ಪರವಾಗಿ ಹಾರೈಸುತ್ತೇನೆ. ಪ್ರತೀ ವರ್ಷದಂತೆ ಈ ಬಾರಿಯೂ ಕಾರ್ಯಕಾರಿ ಸಮಿತಿ ನಿರ್ಧರಿಸಿದಂತೆ ತಾ॥ 19.11.2017ರ ಒಂದು ದಿನದ ಪ್ರೇಕ್ಷಣೀಯ ಸ್ಥಳಕ್ಕೆ ಪ್ರವಾಸವು ಅತ್ಯಂತ ಅಚ್ಚುಕಟ್ಟಾಗಿದ್ದು ಸರ್ವರಿಗೂ ಸಂತೋಷ ನೀಡಿದ್ದು, ಈ ಪ್ರವಾಸಕ್ಕೆ ಕೈ ಜೋಡಿಸಿ ಸಹಕಾರ ನೀಡಿದ ಪ್ರತಿಯೊಬ್ಬರಿಗೂ ಧನ್ಯವಾದಗಳು.

ಪ್ರವಾಸವು ವ್ಯವಸ್ಥಿತವಾಗಿ ನಡೆಯಲು ಉಪ ಸಮಿತಿಯ ಸದಸ್ಯರಾದ ಶ್ರೀಯುತರಾದ ಶಶಿಧರ್, ಅರುಣ್, ಸರ್ಜಾಪುರ ಶ್ರೀನಿವಾಸ್, ಗಣೇಶ್ ಶ್ರೀಧರ್ ಮತ್ತು ಅನಂತರವರ ನಿಸ್ವಾರ್ಥ ಸೇವೆ ಶ್ಲಾಘನೀಯ.

ಸಂಘ ಹಮ್ಮಿಕೊಳ್ಳುವ ಕಾರ್ಯಕ್ರಮಗಳಿಗೆ ಉದಾರವಾಗಿ ದೇಣಿಗೆ ಹಾಗೂ ವಾರ್ಷಿಕ ನಿರ್ವಹಣಾ ವೆಚ್ಚ ನೀಡಲು ಕೋರುತ್ತೇನೆ.





ತಮ್ಮವ,

■ ಎಸ್. ಸೋಮಸುಂದರ

## ಪ್ರವಾಸದ ವಿಶೇಷಾಂಕ




**ಬೃಹಚ್ಚರಣ ಬಂಧುಗಳ ಅವಗಾಹನೆಗಾಗಿ ...**

2018ರ ಹೇವಿಳಂಬಿನಾಮ ಸಂವತ್ಸರದ ನಾಗಾರಾಧನೆಯು ದಿನಾಂಕ 20.02.2018ನೇ ಮಂಗಳವಾರದಂದು ಆನೇಕಲ್ ತಾಲ್ಲೂಕು ಕಿತ್ತಿಗಾನಹಳ್ಳಿಯ ನಾಗೇಶ್ವರ ಕ್ಷೇತ್ರದಲ್ಲಿ ನಡೆಯಲಿದೆ. ಎಲ್ಲ ಬೃಹಚ್ಚರಣ ಸಮುದಾಯದ ಬಂಧುಗಳು ಕುಟುಂಬ ಸಮೇತರಾಗಿ ನಾಗಾರಾಧನೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಭಗವಂತನ ಕೃಪೆಗೆ ಪಾತ್ರರಾಗಲು ವಿನಂತಿ.

ಬೃಹಚ್ಚರಣ ಬಂಧುಗಳು ಅನ್ನ ಸಂತರ್ಪಣಾ ನಿಧಿ ಹಾಗೂ ವಿದ್ಯಾ ನಿಧಿಗೆ ಉದಾರವಾಗಿ ದೇಣಿಗೆ ನೀಡಲು ಬಿನ್ನಹ. ಎಲ್ಲ ಸದಸ್ಯರಿಗೂ ಆಹ್ವಾನ ಪತ್ರಿಕೆಯು ಅಂಚೆಯ ಮೂಲಕ ರವಾನಿಸಲಾಗುತ್ತದೆ.

**ವಿಶೇಷ ಸೂಚನೆ** : ನಾಗಾರಾಧನೆಯಂದು ತನಿ ಎರೆಯುವ ಭಕ್ತಾದಿಗಳು ಅನಾದಿಕಾಲದಿಂದಲೂ ಆಚರಿಸಿಕೊಂಡು ಬರುತ್ತಿರುವ ಕಟ್ಟು ಕಟ್ಟಲೆ, ನಿಯಮಗಳನ್ನು ಗಮನಿಸಿ ಪಾಲಿಸಲು ವಿನಂತಿ.



ವಿ.ಎಸ್. ಮಣಿ

ಕಾರ್ಯದರ್ಶಿ, ಎಂ.ಎಂ.ಡಿ.ಬಿ.ಎಸ್.

## ಧನ್ಯವಾದಗಳು

ಸಂಘದ ಹಿತೈಷಿಯಾದ ಶ್ರೀ **ಚರಣ್ ಸೌಹಾರ್ದ ಕೋ–ಆಪರೇಟಿವ್ ಬ್ಯಾಂಕ್ ಲಿ.,** ಸಂಸ್ಥೆಯು ಸಂಘದ ಚಟುವಟಿಕೆಗಳಿಗಾಗಿ ರೂ. 5,000ಗಳನ್ನು ನೀಡಿದ್ದು, ಸಂಘವು ಧನ್ಯತೆಯಿಂದ ಸ್ವೀಕರಿಸಿದೆ.



## ಮೈ.ಮಂ.ದ್ರಾ.ಬೃ. ಸಂಘದ ಕಾರ್ಯಕಾರಿ ಸಮಿತಿ

**ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಂಗ ಸಂಸ್ಥೆ**

**ಕಾರ್ಯಕಾರಿ ಸಮಿತಿ : 2015–2018**


ಅಧ್ಯಕ್ಷರು

**ಎಸ್. ಸೋಮಸುಂದರ, 99001 13298**

ಉಪಾಧ್ಯಕ್ಷರು

**ಎಚ್.ಕೆ. ಶಶಿಧರ್, 98451 73766**

ಕಾರ್ಯದರ್ಶಿ

**ವಿ.ಎಸ್. ಮಣಿ, 98450 55582**

ಸಹಕಾರ್ಯದರ್ಶಿ

**ಅರುಣ್ ವಿ., 98801 66001**

ಖಜಾಂಚಿ

**ಎಸ್. ಸತ್ಯನಾರಾಯಣ, 99809 45699**

ಲೆಕ್ಕಪರಿಶೋಧಕರು

**ಎಸ್.ಸಿ. ಶ್ರೀನಿವಾಸ, 98453 76949**

ಗೌರವ ಸದಸ್ಯರು

**ಮಂಜುನಾರಾಯಣ್ ಕೆ. 98861 14279**
**ಟಿ.ಎಸ್. ಮಣಿ, 98451 76335**
**ಟಿ.ಎಸ್. ರಮೇಶನ್, 96638 74531**
**ಟಿ.ಪಿ. ಸೂರ್ಯ ನಾರಾಯಣ, 99454 84268**
**ಸರಸ್ವತಿ ನಟರಾಜನ್, 94806 19730**
**ಕೆ. ಜಿ. ವೆಂಕಟೇಶ್, 99640 12687**
**ಆರ್. ಗಣೇಶ್ ಶ್ರೀಧರ್, 9880187686**
**ಟಿ. ನಾಗೇಶ್, 99806 62118**
**ಬಿ.ಎನ್.ಜಿ. ಪ್ರಸಾದ್, 9845128229**
**ಸುಬ್ರಹ್ಮಣ್ಯಂ ಬೆಂಗಳೂರು, 94498 69667**
**ಕೆ.ಬಿ.ಎಸ್. ಶರ್ಮ, 94820 87344**
**ಅನಂತ ಕೆ.ಎಸ್. 97404 44222**
**ಶಂಕರ ಪ್ರಸಾದ್ ಬಿ.ಆರ್. 98456 63833**
**ಕೆ. ಗುಂಡಪ್ಪ, 9845332315**
**ಟಿ.ಎನ್. ರವಿಕಿರಣ್, 9972677005**
**ಸುನಿಲ್ ವಿಜಯ್‌ಕುಮಾರ್, 9986953605**


## ಅಭಿನಂದನೆ

ಮೈಸೂರು ಮಂಜಪತ್ತೂರು ಬೃಹಚ್ಚರಣ ಸಂಘದ ಅಧ್ಯಕ್ಷರಾದ ಶ್ರೀ ಎಸ್.ಸೋಮಸುಂದರರವರು ಭಾರತೀಯ ಸ್ಟೇಟ್ ಬ್ಯಾಂಕ್ ನಿವೃತ್ತ ಅಧಿಕಾರಿಗಳ ಸಂಘಕ್ಕೆ ಉಪಾಧ್ಯಕ್ಷರಾಗಿ ಆಯ್ಕೆ ಆಗಿರುವುದು ನಮಗೆಲ್ಲಾ ಸಂತೋಷ. ಸಂಘದ ಪದಾಧಿಕಾರಿಗಳು ಹಾಗೂ ಸದಸ್ಯರು ತುಂಬು ಹೃದಯದಿಂದ ಶ್ರೀ ಸೋಮಸುಂದರರವರಿಗೆ ಶುಭಾಶಯಗಳನ್ನು ಕೋರಿದ್ದಾರೆ. ಇವರ ಜೀವನೋತ್ಸಾಹವು ನಮಗೆಲ್ಲರಿಗೂ ಮಾದರಿಯಾಗಿರಲಿ.




## ಸಂಪಾದಕೀಯ

'ಬೃಹಚ್ಚರಣ' ಪತ್ರಿಕೆಯು ತಮ್ಮೆಲ್ಲರ ಸಹಕಾರದಿಂದ ದಿನೇ ದಿನೇ ಮೆಚ್ಚುಗೆ ಗಳಿಸುತ್ತಿದೆ. ಲೇಖನಗಳಲ್ಲಿ ವ್ಯಕ್ತವಾಗುವ ವಿಷಯ ಲೇಖಕರ ವ್ಯಕ್ತಿಗತವೇ ಹೊರತು ಸಂಪಾದಕ ಮಂಡಳಿಯ ಅಭಿಪ್ರಾಯ ಎಂದೇನಲ್ಲ. ಕಾರ್ಯಕಾರಿ ಸಮಿತಿ ಸದಸ್ಯ ಶ್ರೀ ಎಸ್.ಸಿ. ಶ್ರೀನಿವಾಸ್‌ರವರನ್ನು ಸಂಪಾದಕ ಮಂಡಳಿಗೆ ಸೇರಿಸಿಕೊಂಡಿದೆ.

ಸುದ್ದಿ, ಸಮಾಚಾರ, ಛಾಯಾಚಿತ್ರ ಕಳುಹಿಸುವವರು kcnraj1153@gmail.comಗೆ ಕಳುಹಿಸಬಹುದು. ಪತ್ರಿಕೆಗೆ ಜಾಹಿರಾತು ನೀಡುವವರು ಮತ್ತು ಪ್ರಾಯೋಜಕರಾಗುವವರು ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯರನ್ನು ಸಂಪರ್ಕಿಸಬಹುದು. ಪತ್ರಿಕೆಗೆ ಸತತವಾಗಿ ಲೇಖನಗಳನ್ನು ಕಳುಹಿಸುತ್ತಿರುವ ಶ್ರೀಮತಿ ಜಿ.ಪಿ.ಲಕ್ಷ್ಮೀದೇವಿ, ಭ್ರಮರಾ ಗೋಪಿನಾಥ್, ಗಾಯತ್ರಿ ಶೇಷಾಚಲ, ಶ್ರೀಯುತ ಎಂ.ಪಿ.ರಂಗನಾಥನ್, ಎಸ್.ಶ್ರೀನಿವಾಸಯ್ಯ, ಆರ್.ರಮೇಶ್, ಜಿ.ಎಸ್.ಸತ್ಯಮೂರ್ತಿ, ಅವರಿಗೆ ಧನ್ಯವಾದಗಳು. ತ್ಯಾಗರಾಜ ಹಾಗೂ ಪುರಂದರದಾಸರ ಆರಾಧನೆಯ ಸಂದರ್ಭಕ್ಕಾಗಿ ವಿಶೇಷ ಲೇಖನಗಳನ್ನು ಪ್ರಕಟಿಸಿದೆ.

ಪ್ರವಾಸದ ಛಾಯಾಚಿತ್ರಗಳನ್ನು ಒದಗಿಸಿರುವ ಕುಮಾರಿ ಅಶ್ವಿನಿ, ಶ್ರೀಯುತರಾದ ಸುನಿಲ್ ವಿಜಯಕುಮಾರ್, ಶಿವಕುಮಾರ್, ವಿ.ಎಸ್. ಮಣಿ, ಅಶೋಕ್ ವಿ., ಸುಬ್ರಹ್ಮಣ್ಯಂ ಅವರಿಗೆ ಆಭಾರಿ.



**ಕೆ.ಸಿ. ನಟರಾಜ್**
ಸಂಪಾದಕ

## ಅಭಿನಂದನೆಗಳು

ಸಂಘದ ಪೋಷಕರಾದ ಶ್ರೀ ಎಂ.ಪಿ.ರಂಗನಾಥನ್‌ರವರ ಪತ್ನಿ ಶ್ರೀಮತಿ ವಸಂತರವರ ಹುಟ್ಟಿದ ದಿನದ ಸವಿ ನೆನಪಿಗಾಗಿ ಸಂಘವು ಹಮ್ಮಿಕೊಂಡಿದ್ದ ಪ್ರವಾಸದ ಸದಸ್ಯರಿಗಾಗಿ ದಣಿವಾರಿಸಿಕೊಳ್ಳಲು ಕಿತ್ತಳೆ ಹಣ್ಣುಗಳನ್ನು ಅವರ ಅಪೇಕ್ಷೆಯಂತೆ ವಿತರಿಸಲಾಯಿತು.

ಸಂಘದ ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀ ಮಂಜುನಾರಾಯಣ್‌ರವರು ಪ್ರವಾಸದ ಸಮಯದಲ್ಲಿ ಪ್ರವಾಸಿಗರಿಗಾಗಿ ರುಚಿರುಚಿಯಾದ ಕೋಡುಬಳೆಯನ್ನು ನೀಡಿದರು.

ಈ ಪ್ರಾಯೋಜಕರಿಗೆ ಸಂಘದ ಅಭಿನಂದನೆಗಳು.

* * *

**ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ "ವಿಪ್ರನುಡಿ" ಪತ್ರಿಕೆಯಲ್ಲಿ ನಮ್ಮ ಸಂಘದ ಕಾರ್ಯಚಟುವಟಿಕೆಗಳ ಬಗ್ಗೆ ಸಚಿತ್ರ ಲೇಖನ ಪ್ರಕಟಿಸುತ್ತಿರುವುದಕ್ಕೆ ಬ್ರಾಹ್ಮಣ ಮಹಾಸಭೆ ಅಧ್ಯಕ್ಷರಿಗೆ ಹಾಗೂ "ವಿಪ್ರನುಡಿ" ಸಂಪಾದಕರಿಗೆ ಧನ್ಯವಾದಗಳು.**

## ಅಭಿನಂದನಾರ್ಹರು

ಜಾಲತಾಣವಾದ ವಾಟ್ಸಾಪ್‌ನಲ್ಲಿ ನಮ್ಮ ಬೃಹಚ್ಚರಣದ ಹಿರಿಯ ಸದಸ್ಯರಾದ ಶ್ರೀ ಆರ್.ಎಸ್.ರಾಜಗೋಪಾಲ್‌ರವರು 'ಶ್ರೀಮದ್ ಭಗವದ್ಗೀತಾ ತಾತ್ಪರ್ಯವನ್ನು, ಡಿ.ವಿ.ಜಿಯವರ ಸಂಬಂಧಿಕರಾದ ಶ್ರೀ ಆರ್. ಚಂದ್ರಮೌಳಿಯವರು 'ಮಂಕುತಿಮ್ಮನ ಕಗ್ಗ'ದ ತಾತ್ಪರ್ಯವನ್ನು ಹಾಗೂ ಶ್ರೀ ಸಿ.ಕುಮಾರ್‌ರವರು 'ನಿತ್ಯ ಪಂಚಾಗ'ದ ಜೊತೆಗೆ ಕೆಲವು ವಿರಳ ಕನ್ನಡದ ಪದಗಳಿಗೆ ಅರ್ಥವನ್ನು ನೀಡುತ್ತಿದ್ದಾರೆ. ಇವರುಗಳು ಜೀವನಕ್ಕೆ ಉಪಯುಕ್ತವಾದ ಲೇಖನ–ಮಾಹಿತಿಯನ್ನು ನೀಡುತ್ತಿರುವುದರಿಂದ ಓದುಗರೆಲ್ಲರ ಮನಸ್ಸಿನಲ್ಲಿ ಚಿಂತನ–ಮಂಥನ ಆಗುತ್ತಿರುವುದು ಸಾಧಾರಣ ವಿಷಯವಲ್ಲ. ಯುವ ಜನಾಂಗಕ್ಕೆ ದಾರಿದೀಪವಾಗಲು ಈ ಲೇಖನಗಳು ಸಹಕಾರಿಯಾಗಿದೆ. ಸಮುದಾಯದ ಈ ಸದಸ್ಯರು ಅಭಿನಂದನಾರ್ಹರು.

## ನಮ್ಮನ್ನಗಲಿದವರು

ಬಿ.ಸಿ.ಸತ್ಯನಾರಾಯಣ (73) 20.11.2017 – ಸಂಘದ ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀ ವಿ. ಅರುಣ್‌ರವರ ಮಾವ.

ಅಟ್ಟೂರು ಶ್ರೀನಿವಾಸ ಶರ್ಮ 10.12.2017 – ಸದಸ್ಯ ಶ್ರೀ ರಮೇಶ್‌ಬಾಬು ಅವರ ತಂದೆ.

ಜಿ.ಎನ್. ನಂದಕಿಶೋರ್ (63), 27.12.2017 – ಜಿ.ಕೆ. ನಾಗರಾಜ್‌ರವರ ಪುತ್ರ

# ಪ್ರವಾಸದ ಛಾಯಾಚಿತ್ರಗಳು

ಚಿತ್ರಕೃಪೆ : ಶಿವಕುಮಾರ್ ಎನ್.



















# ಅವಿಸ್ಮರಣೀಯ ಪ್ರವಾಸ

**ಸಂ**ಘದಿಂದ ಏರ್ಪಡಿಸಿದ್ದ ಪ್ರವಾಸವು ಕ್ರಮಬದ್ಧವಾಗಿ, ಶಿಸ್ತುಬದ್ಧವಾಗಿ ಆಯೋಜನೆಗೊಂಡಿತ್ತು. ಪ್ರಯಾಣದ ಪ್ರಾರಂಭದಲ್ಲಿಯೇ ಎಲ್ಲರಿಗೂ ಉಪಯುಕ್ತ ಹಾಗೂ ಸಂಗ್ರಹಯೋಗ್ಯವಾದ ಕೈಚೀಲದೊಂದಿಗೆ ನೀರಿನ ಸೀಸೆ, ಬಿಸ್ಕತ್ತಿನ ಪೊಟ್ಟಣ, ಕರವಸ್ತ್ರ, ಚಮಚ, ರುಚಿರುಚಿಯಾದ ನಾಲಿಗೆಗೆ ಮುದ ನೀಡುವ ಕುರುಕಲು ತಿಂಡಿಗಳು, ಸಿಹಿಯಾದ ಕಿತ್ತಳೆ ಹಣ್ಣುಗಳನ್ನು ನೀಡಲಾಯಿತು.

ಹಾದಿಯಲ್ಲಿ ಕಾಮತ್ ಹೋಟಲಿನ ಬಳಿ ಬಸ್ಸನ್ನು ನಿಲ್ಲಿಸಲಾಯಿತು. ಹೋಟಲ್‌ನಲ್ಲಿ ಗಾಢವಾಗಿ ಹಬ್ಬಿದ್ದ ಕಾಫಿಯ ಘಮಘಮ ಸುವಾಸನೆ ನಮ್ಮೆಲ್ಲರ ಘ್ರಾಣೇಂದ್ರಿಯಗಳನ್ನು ಕೆರಳಿಸಿತು. ಕಾಫಿಯ ಸೇವನೆಯಿಂದ ದೇಹ, ಮನಸ್ಸುಗಳು ಮತ್ತಷ್ಟು ಉಲ್ಲಾಸಿತವಾದವು.

ನಂತರ ಪ್ರಯಾಣದ ಬೇಸರ, ಆಯಾಸಗಳೇ ತಿಳಿಯದಂತೆ ನಾನಾ ವಿಧವಾದ ಮನೋರಂಜಕ ಆಟಗಳಲ್ಲಿ ಮೈಮರೆತಿದ್ದಂತೆ, ನಾವು ಮುಳಬಾಗಿಲು ತಲುಪಿದೆವು. ಅಲ್ಲಿ ಮಹಿಮಾನ್ವಿತನಾದ ಆಂಜನೇಯ ಸ್ವಾಮಿಯ ದೇವಸ್ಥಾನಕ್ಕೆ ಭೇಟಿ ನೀಡಿದೆವು. ಈ ದೇವಾಲಯದ ಐತಿಹ್ಯವು ನಮ್ಮಲ್ಲಿ ರೋಮಾಂಚನ ಮನಸ್ಸಿಗೆ ಸಾರ್ಥಕತೆಯನ್ನೂ ನೀಡಿತು. ಈ ದೇವಾಲಯವು ಮಹಾಭಾರತ ಯುದ್ಧವಾದ ಮೇಲೆ ಶ್ರೀಕೃಷ್ಣ ಪರಮಾತ್ಮನ ಆಜ್ಞೆಯಂತೆ ಅರ್ಜುನನ ರಥದ ಮೇಲಿದ್ದ ಹನುಮಧ್ವಜವನ್ನು ತೆಗೆದುಕೊಂಡು ಬಂದು ಈ ಶತಕರ್ನಾಟಕಪುರಿ (ಮುಳುಬಾಗಿಲು)ಯಲ್ಲಿ ಅರ್ಜುನನಿಂದ ಪ್ರತಿಷ್ಠಾಪಿಸಲಾಯಿತು. ಇಲ್ಲಿ ಶ್ರೀವೈಖಾನಸಾಗಮ ರೀತ್ಯ ಅರ್ಚನಾದಿಗಳು ನಡೆಸಲ್ಪಡುತ್ತವೆ. ಐದು ಸಾವಿರ ವರ್ಷಗಳಷ್ಟು ಪುರಾತನವಾಗಿರುವ ಈ ದೇವಾಲಯವು 'ಮೂಡಲಬಾಗಿಲು' ಎಂಬ ಪ್ರಸಿದ್ಧವಾದ ಯಾತ್ರಾಸ್ಥಳವಾಗಿದ್ದು ಶ್ರೀಕೃಷ್ಣದೇವರಾಯನ ಕಾಲದಲ್ಲಿ ಇದರ ಜೀರ್ಣೋದ್ಧಾರವನ್ನು ಮಾಡಲಾಗಿತ್ತು. ಈಗ ಪುನಃ ಭಾರತ ಸರ್ಕಾರವು ಈ ದೇವಸ್ಥಾನವನ್ನು ಪುನರುದ್ಧಾರ ಮಾಡಲು ಉದ್ದೇಶಿಸಿದೆ.

ದೇವಸ್ಥಾನದ ದರ್ಶನ ಮುಗಿಯುವ ವೇಳೆಗೆ ಹೊಟ್ಟೆ ಚುರುಗುಡುತ್ತಾ ಹಸಿವನ್ನು ಕೆರಳಿಸಿತು. ಬಿಸಿಬಿಸಿಯಾದ ರುಚಿರುಚಿಯಾದ ಬೆಳಗಿನ ಉಪಹಾರ ನಮ್ಮನ್ನು ಕೈಬೀಸಿ ಕರೆಯಿತು. ಇಡ್ಲಿ, ವಡೆ, ಚಟ್ನಿ, ಪೊಂಗಲ್, ಕ್ಯಾರೆಟ್ ಹಲ್ವ ಹೊಟ್ಟೆಯ ಹಸಿವನ್ನು ತಣಿಸಿದರೆ, ದೇವರ ಪ್ರಸಾದವಾದ ಸವಿಯಾದ ರಸಾಯನ ಮನಸ್ಸನ್ನು ತಣಿಸಿತು. ಚೈತನ್ಯದಾಯಕ ಭರ್ಜರಿ ಉಪಹಾರ ಮುಂದಿನ ಪ್ರಯಾಣಕ್ಕೆ ನಮ್ಮನ್ನು ಅಣಿಗೊಳಿಸಿತು. ನಮ್ಮ ಮುಂದಿನ ಭೇಟಿ ಕುರುಡುಮಲೆ ಕ್ಷೇತ್ರಕ್ಕೆ. ಇಲ್ಲಿ ಏಕಶಿಲಾ ಸಾಲಿಗ್ರಾಮದಲ್ಲಿ ಮಾಡಿರುವ ಬೃಹದಾಕಾರದ ಗಣಪತಿ ದೇವಾಲಯವಿದೆ. ಮುದ್ದಾದ ಗಣಪತಿಯು ತನ್ನ ಭವ್ಯ ಅಲಂಕಾರದಿಂದ ನಮ್ಮ ಕಣ್ಮನಗಳನ್ನು ತಣಿಸಿದನು. ಶ್ರದ್ಧಾಭಕ್ತಿಗಳಿಂದ ಅವನಿಗೆ ಪೂಜೆ ಮಾಡಿಸಿ, ಕೊಲಾದೇವಿಯ ಗರುಡ ದೇವಸ್ಥಾನಕ್ಕೆ ಬಂದೆವು.

"ಹೆಜ್ಜೆಗೊಂದು ಹಿರಿಮೆ, ಮಾತಿಗೊಂದು ಮಹಿಮೆ, ಪ್ರತಿಜಲವೂ ಪಾವನ ತೀರ್ಥ, ಪ್ರತಿದೈವವೂ ಪರಮಪುನೀತ ಎಂಬುದೇ ಈ ನಾಡ ಹಿರಿಮೆ" ಎಂಬ ಮಾತಿನಂತೆ ಈ ಗರುಡ ದೇವಸ್ಥಾನ ಅತ್ಯಂತ ವೈಶಿಷ್ಟ್ಯಪೂರ್ಣವಾಗಿದೆ. ಈ ಗರುಡನ ವಿಗ್ರಹದಲ್ಲಿ ಎಂಟು ಸರ್ಪಗಳಿದ್ದು ಇವನನ್ನು ಪೂಜಿಸಿದರೆ ಎಂತಹ ಸರ್ಪದೋಷವೂ ನಿವಾರಣೆಯಾಗುತ್ತದೆ ಎಂಬ ಪ್ರತೀತಿ ಇದೆ. ಗರುಡನ ಎದೆಯ ಭಾಗದಲ್ಲಿ ಒಂದು ಕಡೆ ವಿಷ್ಣು, ಮತ್ತೊಂದು ಕಡೆ ಲಕ್ಷ್ಮೀದೇವಿ ನೆಲೆಸಿದ್ದಾರೆ. ಇಂತಹ ವೈಶಿಷ್ಟ್ಯಗಳನ್ನು ಹೊಂದಿರುವ ಗರುಡನ ದರ್ಶನ ಮತ್ತು ಪೂಜೆ ನಿಜಕ್ಕೂ ಜೀವಕ್ಕೆ ಪರಿಪೂರ್ಣತೆಯನ್ನೂ, ಸಾರ್ಥಕತೆಯನ್ನೂ ತಂದುಕೊಟ್ಟಿತು. ನಂತರ ನಮ್ಮ ಪ್ರಯಾಣ ಆವನಿಯ ಶೃಂಗೇರಿ ಮಠದತ್ತ ಸಾಗಿತ್ತು. ಬೆಳಗಿನ ಉಪಹಾರವೆಲ್ಲಾ ಕರಗಿ, ನಮ್ಮ ಉದರವು ಊಟದ ಸಮಯವನ್ನು ಸಾರಿ ಹೇಳಿತು. ಸಂಘವು ಏರ್ಪಡಿಸಿದ್ದ ಪುಷ್ಕಳವಾದ ಹೋಳಿಗೆ ಊಟದ ಸುಗ್ರಾಸ ಭೋಜನ ನಮಗೆ ರಸದೌತಣವಾಯಿತು. ಎಲ್ಲಾ ಪ್ರಯಾಣಿಕರೂ ತೃಪ್ತಿಯಾಗಿ ಉಂಡು ಆಯೋಜಕರನ್ನು "ಅನ್ನದಾತೋ ಸುಖೀಭವ" ಎಂದು ಹರಸಿದರು.

ನಂತರ ಅಲ್ಲಿಯೇ ಇರುವ ಶಾರದಾಂಬೆಯ ದೇವಸ್ಥಾನಕ್ಕೆ ಭೇಟಿಯಿತ್ತೆವು. ಸಂಗೀತ, ಸಾಹಿತ್ಯ ಕಲಾ ವಿಶಾರದೆ ಲೋಲಲೋಚನೆಯಾದ ಈ ಮಾತೆಯ ಮುದ್ದಾದ ವಿಗ್ರಹವೂ, ಪ್ರಶಾಂತವಾದ ವಾತಾವರಣವೂ ನಮಗರಿವಿಲ್ಲದೇ ಧ್ಯಾನಸ್ಥರಾಗುವಂತೆ ಮಾಡಿ ತನ್ಮಯಗೊಳಿಸಿತು.

ಅಲ್ಲಿಂದ ತುಸು ದೂರದಲ್ಲಿರುವ ರಾಮಲಿಂಗೇಶ್ವರನ ದೇವಸ್ಥಾನಕ್ಕೆ ಹೋದೆವು. ಮಂಗಳಾಂಗನೂ, ಸರ್ವೋತ್ತಮನೂ, ಅಂತರಂಗಪ್ರಭುವೂ ಆದ ಶಿವನ ಲಿಂಗಗಳನ್ನು ಮಹಿಮಾನ್ವಿತರಾದ ರಾಮ, ಲಕ್ಷ್ಮಣ, ಭರತ, ಶತೃಘ್ನ, ಆಂಜನೇಯ, ವಾಲಿ, ಸುಗ್ರೀವರು ಪ್ರತಿಷ್ಠಾಪಿಸಿದ್ದಾರೆಂದು ಹೇಳಲಾಗುವ ಈ ದೇವಸ್ಥಾನವು ತ್ರೇತಾಯುಗದ್ದೆಂದು ಹೇಳಲಾಗುತ್ತದೆ.

ಪುಷ್ಕಳ ಭೋಜನವನ್ನುಂಡ ದೇಹ ವಿಶ್ರಾಂತಿಯನ್ನು ಬಯಸಿದ್ದರಿಂದ ತುಸುಕಾಲ ವಿಶ್ರಾಂತಿ ಪಡೆದು, ವಿರೂಪಾಕ್ಷ ದೇವಸ್ಥಾನಕ್ಕೆ ಭೇಟಿಯಿತ್ತೆವು. ಇಲ್ಲಿ ಸುಂದರವಾದ ಅವಳಿ ಲಿಂಗಗಳಿವೆ. ಈ ಲಿಂಗಗಳ ವೈಶಿಷ್ಟ್ಯತೆಯೆಂದರೆ ಬೆಳಿಗ್ಗೆ, ಮಧ್ಯಾಹ್ನ, ಸಂಜೆ ಲಿಂಗಗಳ ಬಣ್ಣ ಬದಲಾಗುತ್ತದೆ. ಅಲ್ಲದೆ ಈ ದೇವಾಲಯಕ್ಕೆ ಯಾವುದೇ ಜಾತಿ, ಧರ್ಮ, ಲಿಂಗ ಭೇದವಿಲ್ಲದೆ ದೇವರ ದರ್ಶನಕ್ಕೆ ಮುಕ್ತ ಪ್ರವೇಶವನ್ನು ಕಲ್ಪಿಸಲಾಗಿದೆ. ಈ ದೇವಸ್ಥಾನವು ಸರ್ವಧರ್ಮ ಸಮನ್ವಯದ ಪ್ರತೀಕವಾಗಿದೆ ಮತ್ತು ದೇಶಕ್ಕೆ ಮಾದರಿಯಾಗಿದೆ.

ಇಂತಹ ದಿವ್ಯ ಕ್ಷೇತ್ರಗಳ ಪುಣ್ಯ ದರ್ಶನದಿಂದ ಈ ದಿನವು ಸಾರ್ಥಕವಾಗಿ ಕಳೆಯಿತು ಎಂದುಕೊಳ್ಳುತ್ತಿರುವಾಗಲೇ ಬಂಗಾರಪೇಟೆಯಿಂದ ಬಂದಿದ್ದ ಪಾಕಪರಿಣಿತರು ಪಾನಿಪುರಿ, ಮಸಾಲೆಪುರಿ, ಭೇಲ್‌ಪುರಿಗಳ ರಸಭರಿತ ಲಘು ಉಪಹಾರವನ್ನು ನೀಡಿ ಮೊದಲೇ ಆನಂದಭರಿತವಾಗಿದ್ದ ಮನಸ್ಸಿಗೆ ಇನ್ನಷ್ಟು ಹರ್ಷವನ್ನು ತುಂಬಿದರು. ಈ ಅವಿಸ್ಮರಣೀಯ ಪ್ರವಾಸವು ಇಷ್ಟು ಬೇಗ ಮುಗಿದು ಹೋಯಿತೇ ಎಂಬ ಅತೃಪ್ತಿ ಮನಸ್ಸನ್ನು ಕಾಡುತ್ತಿರುವಂತೆಯೇ ನಮ್ಮ ಬಸ್ಸು ನಮ್ಮೆಲ್ಲರನ್ನು ಬೆಂಗಳೂರಿಗೆ ತಲುಪಿಸಿಯೇ ಬಿಟ್ಟಿತು.

ಅತ್ಯಂತ ಸೂಕ್ತವಾದ ಸ್ಥಳಗಳ ಆಯ್ಕೆ, ಶಿಸ್ತುಬದ್ಧ ಕಾರ್ಯಯೋಜನೆಗಳಿಂದ ನಮ್ಮೆಲ್ಲರ ಮನಮೆಚ್ಚಿಸಿ ಅವಿಸ್ಮರಣೀಯ ಆನಂದದಾಯಕ ಅನುಭವವನ್ನು ನೀಡಿದ ಸಮುದಾಯದ ಅಧ್ಯಕ್ಷರಾದ ಶ್ರೀ ಸೋಮಸುಂದರ ಮತ್ತು ಇತರ ಕಾರ್ಯಕಾರಿ ಸಮಿತಿಯ ಸದಸ್ಯರಿಗೆ ಧನ್ಯವಾದಗಳನ್ನು ತಿಳಿಸಿ, ಪ್ರವಾಸದ ಸವಿನೆನಪುಗಳನ್ನು ಮೆಲುಕುಹಾಕುತ್ತಾ ಮನೆಯತ್ತ ಹೊರಟೆವು.

# ನಂ ಬಸ್ - 'ಸಿ'

'ದೇಶ ಸುತ್ತು ಕೋಶ ಓದು' ಎಂಬ ನಾಣ್ಣುಡಿಯಂತೆ ಪ್ರವಾಸಗಳು ಮನರಂಜನೆಯೊಂದಿಗೆ ಜ್ಞಾನಾರ್ಜನೆಗೂ ಸಹಾಯಕವಾಗುತ್ತವೆ. ದೈಹಿಕ ದಣಿವಿನೊಂದಿಗೆ ಮಾನಸಿಕ ದಣಿವೂ ಪರಿಹಾರವಾಗಿ ನವೋಲ್ಲಾಸ, ಚೈತನ್ಯ ಕೊಡುತ್ತವೆ. ಬೃಹಚ್ಚರಣ ಸಂಘ ದಿನಾಂಕ 19.11.2017ರಂದು ಏರ್ಪಡಿಸಿದ್ದ ಪ್ರವಾಸ ಬೆಳಿಗ್ಗೆ ಕೆ.ಆರ್.ರಸ್ತೆಯ ದ್ವಾರಕಾನಾಥ ಭವನದಿಂದ ಪ್ರಾರಂಭವಾಯಿತು. 155 ಜನ ಬಂಧುಗಳು, ಮಿತ್ರರು ನಮ್ಮ ಸಹ ಪ್ರಯಾಣಿಕರಾಗಿದ್ದರು. ಪ್ರಯಾಣಕ್ಕಾಗಿ ನಾಲ್ಕು ಬಸ್ಸುಗಳನ್ನು ಆಯೋಜಿಸಲಾಗಿತ್ತು.

ನಮ್ಮ ಬಸ್ಸಿಗೆ 'ಸಿ' ಎಂಬ ಸಂಕೇತ ನೀಡಲಾಗಿದ್ದು ಹೆಸರಿನಲ್ಲಿದ್ದಂತೆ 'ಸಿಹಿ ಸ್ನೇಹ ಸಿಂಚನ' ಎಂಬ ಭಾವನೆಗೆ ಅನ್ವರ್ಥವಾಗಿದೆ ಎಂದೆನಿಸಿತು. ನಮ್ಮ ಬಸ್ಸಿನ ಮೇಲ್ವಿಚಾರಕರು ಸ್ನೇಹಮಯಿಗಳಾದ ಶ್ರೀಯುತ ಗುಂಡಪ್ಪನವರಾಗಿದ್ದರು. ನಮ್ಮ ಬಸ್ಸಿನಲ್ಲಿ 42 ಪ್ರಯಾಣಿಕರಿದ್ದರು. ಅವರಲ್ಲಿ ಅಧ್ಯಕ್ಷರಾದ ಶ್ರೀ ಸೋಮಸುಂದರ ಮತ್ತು ಕುಟುಂಬದವರೂ ಇದ್ದದ್ದು ನಮಗೆ ಹೆಚ್ಚು ಚೈತನ್ಯವನ್ನು ಮತ್ತು ಮುದವನ್ನೂ ನೀಡಿತು. ಎಲ್ಲಾ ಪ್ರಯಾಣಿಕರು ತುಂಬಾ ಉತ್ಸುಕರೂ ಹಾಗೂ ಲವಲವಿಕೆಯುಳ್ಳವರೂ ಆಗಿದ್ದರು. ವಯಸ್ಸಿನ ಮಿತಿಯಿಲ್ಲದೆ ಎಲ್ಲರೂ ಚಟುವಟಿಕೆಯಿಂದ ವಿಧ ವಿಧವಾದ ಆಯೋಜಿತ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಮುದಗೊಂಡರು.

ಪ್ರವಾಸವು ಯಾವುದೇ ತೊಂದರೆಯಿಲ್ಲದೆ ಸುಖಕರವೂ ಆರಾಮದಾಯಕವೂ ಆಗಿರಲೆಂಬ ಅಭಿಲಾಷೆಯಿಂದ ವಿಷ್ಣು ಸಹಸ್ರನಾಮದ ಪಾರಾಯಣದೊಂದಿಗೆ ನಮ್ಮ ಪ್ರಯಾಣವು ಪ್ರಾರಂಭವಾಯಿತು. ಹಲವಾರು ಸುಮಧುರ ಭಜನೆಗಳ ಗಾಯನದಿಂದ ಭಕ್ತಿಯ ಲೋಕವೇ ನಿರ್ಮಾಣವಾಯಿತು. ಆ ಭಕ್ತಿಲೋಕದಿಂದ ಪುನಃ ಪ್ರಯಾಣದ ಪ್ರಪಂಚಕ್ಕೆ ಕರೆತಂದದ್ದು ಚೇತೋಹಾರಿಯಾದ ಅಂತ್ಯಾಕ್ಷರೀ ಕಾರ್ಯಕ್ರಮ. ಅಧ್ಯಕ್ಷರ ಪತ್ನಿಯಾದ ಶ್ರೀಮತಿ ಜಯಶ್ರೀಯವರು ಯುವತಿಯರನ್ನೂ ನಾಚಿಸುವಂತೆ ಎಲ್ಲಾ ಕಾರ್ಯಕ್ರಮಗಳ ಮುಂದಾಳತ್ವವನ್ನು ವಹಿಸಿ ಪ್ರತಿಯೊಬ್ಬರೂ ಅಷ್ಟೇ ಉತ್ಸಾಹದಿಂದ ಪಾಲ್ಗೊಳ್ಳುವಂತೆ ಪ್ರೇರೇಪಿಸಿದರು. ಅಂತ್ಯಾಕ್ಷರಿ ಕಾರ್ಯಕ್ರಮದಲ್ಲಿ ಅದೆಷ್ಟು 'ಜೋಶ್'ನಿಂದ ಎಲ್ಲರೂ ಮುಳುಗಿದ್ದರೆಂದರೆ ದಾರಿ ಸಾಗಿದ್ದೇ ತಿಳಿಯಲಿಲ್ಲ.


ನಂತರ ಒಂದು ನಿಮಿಷದವರೆಗೆ ಅಚ್ಚಕನ್ನಡದಲ್ಲಿ ಒಂದೂ



ಆಂಗ್ಲಪದ ಬಳಕೆಯಿಲ್ಲದೆ ಯಾವುದಾದರೂ ಒಂದು ವಿಷಯದ ಬಗ್ಗೆ ಮಾತನಾಡಬೇಕೆಂಬ ಆಟವನ್ನು ಆಡಿದೆವು. ಈ ಆಟವಂತೂ ಅತ್ಯಂತ ಸ್ಪರ್ಧಾತ್ಮಕವೂ ಮನರಂಜನೀಯವೂ ಆಗಿದ್ದು, ನಮ್ಮೆಲ್ಲರನ್ನೂ ಹರ್ಷದ ಕಡಲಲ್ಲಿ ಮುಳುಗಿಸಿ, ನಮ್ಮ ಭಾಷಾಭಿಮಾನವನ್ನೂ ಜಾಗೃತಗೊಳಿಸಿತು. ಕೆಲವರಿಗಂತೂ ಈ ಆಟವು ಅತ್ಯಂತ ಕಠಿಣವೆನಿಸಿತು.

ಪ್ರವಾಸ ಎಷ್ಟು ಅವಿಸ್ಮರಣೀಯ ಮತ್ತು ಆನಂದದಾಯಕವಾಗಿತ್ತೆಂದರೆ ಶ್ರೀಮತಿ ತಾರ ರವಿಯವರ ಸ್ನೇಹಿತರು ಸಮುದಾಯಕ್ಕೆ ಸೇರಿಲ್ಲದಿದ್ದರೂ ಸದಸ್ಯರಾಗಲು ಬಯಸಿದರು ಮತ್ತು ಪುನಃ ಪುನಃ ಈ ರೀತಿಯ ಪ್ರವಾಸ ಅಥವಾ ಇನ್ನಿತರೆ ಸಮುದಾಯದ ಕಾರ್ಯಕ್ರಮಗಳಲ್ಲಿ ಅವರೂ ಪಾಲ್ಗೊಳ್ಳಬೇಕೆಂದು ಬಯಸಿದರು.

ಬಸ್ಸಿನಲ್ಲಿದ್ದ ಎಲ್ಲಾ ಪ್ರಯಾಣಿಕರೂ ಒಂದೇ ಕುಟುಂಬದವರಂತೆ ಎಲ್ಲಾ ಕಾರ್ಯಕ್ರಮಗಳಲ್ಲೂ ಪಾಲ್ಗೊಂಡು ಸಿಕ್ಕಾಪಟ್ಟೆ ಖುಷಿಪಟ್ಟರು. ಒಟ್ಟಾರೆ ನಮ್ಮ ಬಸ್ಸು ತನ್ನ ಸಂಕೇತ "ಸಿ"ಗೆ ಅನ್ವರ್ಥವಾಗಿ ಎಲ್ಲರಿಗೂ ಸಿಹಿಯನ್ನು ಉಣಬಡಿಸಿತು. ಶ್ರೀ ನಿರಂಜನ್‌ರವರ ಹುಟ್ಟುಹಬ್ಬ ಆ ದಿನವೇ ಆಗಿದ್ದುದ್ದರಿಂದ ನಮ್ಮ ಬಸ್ಸಿನ ಎಲ್ಲಾ ಪ್ರಯಾಣಿಕರೂ ಅವರಿಗೆ ಶುಭ ಕೋರಿದರು.




**ಎಸ್.ಎ. ಶ್ರೀದೇವಿ**
**9448087909**



# ನಂ ಬಸ್ - 'ಬಿ'

ತಾ॥ 19.11.2017ನೇ ಭಾನುವಾರ ಸಂಘವು ಒಂದು ದಿನದ ಪ್ರವಾಸವನ್ನು ಏರ್ಪಡಿಸಿತ್ತು. ಬೆಳಿಗ್ಗೆ ದ್ವಾರಕನಾಥ ಭವನದ ಬಳಿ ಎಲ್ಲರೂ ಸೇರಬೇಕೆಂದು ಸಂಘದಿಂದ ಸಂದೇಶ ಕಳುಹಿಸಲಾಗಿತ್ತು. ಒಟ್ಟು ನಾಲ್ಕು ಎಸ್.ಆರ್.ಎಸ್ ಬಸ್ಸುಗಳಿದ್ದವು. ನಮ್ಮ ಬಸ್ಸು 'ಬಿ' ಆಗಿದ್ದು ಸರಿಯಾಗಿ 7 ಗಂಟೆಗೆ ಪ್ರಯಾಣ ಹೊರಟೆವು. ವಿನಾಯಕನ ಪ್ರಾರ್ಥನೆಯೊಂದಿಗೆ ನಮ್ಮ ವಿನೋದಾವಳಿ ಪ್ರಾರಂಭವಾಗಿ ವ್ಯಕ್ತಿಗಳ ಪರಿಚಯದೊಂದಿಗೆ ಮುಂದುವರೆದು, ಹಾಸ್ಯ ಚಟಾಕಿ ಹಾರಿಸುತ್ತಾ, ಸಂತೋಷವಾಗಿ ಪಯಣಿಸಿದೆವು. ಬೆಳಗ್ಗಿನ ವಾತಾವರಣ ಮನಸ್ಸಿಗೆ ಮುದ ನೀಡಿತ್ತು. 8.45ರ ಸುಮಾರಿಗೆ 'ಕಾಮತ್ ಉಪಚಾರ್'ನಲ್ಲಿ ಕಾಫಿ ವಿತರಣೆಯಾಯಿತು. ನಂತರ ಮುಳುಬಾಗಿಲಿಗೆ ಪ್ರಯಾಣ. 9.30ಕ್ಕೆ ಆಂಜನೇಯ ದೇವಾಲಯ ತಲುಪಿದೆವು. ವಾಯುದೇವರ ದರ್ಶನ, ಪೂಜೆ ಆದ ಮೇಲೆ ನಾವೆಲ್ಲಾ ಹಾಡು ಹೇಳಿ, ಪ್ರಸಾದದೊಂದಿಗೆ ಆಚೆ ಬಂದೆವು. ಎಲ್ಲರೂ ಫೋಟೋ ತೆಗೆಸಿಕೊಂಡು ಅಲ್ಲೇ ಹತ್ತಿರವಿದ್ದ ಛತ್ರದಲ್ಲಿ ಬೆಳಗಿನ ಭರ್ಜರಿಯಾದ ಉಪಹಾರ ಸೇವಿಸಿದೆವು. ಮಧ್ಯಾಹ್ನ 12.30ಕ್ಕೆ ಕೂಡುಮಲೆ ಗಣಪತಿಯ ದೇವಾಲಯಕ್ಕೆ ಭೇಟಿಕೊಟ್ಟೆವು. ಸಾಲಿಗ್ರಾಮ ಶಿಲೆಯ ಬೃಹದಾಕಾರದ ಗಣಪತಿಯು ಆಕರ್ಷಕವಾಗಿದ್ದು ಇದನ್ನು (ಬ್ರಹ್ಮ, ವಿಷ್ಣು, ಮಹೇಶ್ವರ) ತ್ರಿಮೂರ್ತಿಗಳು ಪ್ರತಿಷ್ಠಾಪಿಸಿದರು ಎಂದು ಪ್ರತೀತಿ ಇದೆ.

ಮುಂದೆ ಕೊಲಾದೇವಿಯ ಗರುಡ ದೇವಾಲಯವನ್ನು ತಲುಪಿದೆವು. ಅದು ಜಟಾಯು ಮರಣ ಹೊಂದಿದ ಸ್ಥಳ ಎಂದು ಪುರಾಣ ತಿಳಿಸುತ್ತದೆ. ಲಕ್ಷ್ಮಿ, ವೆಂಕಟೇಶ್ವರನನ್ನು ಕೈಯಲ್ಲಿ ಹೊತ್ತು ಅಷ್ಟ ಸರ್ಪಗಳನ್ನು ಹೊಂದಿರುವ ಗರುಡ, ಶನಿ ದೇವರ ದರ್ಶನ ಮುಗಿಸಿ ಆವನಿ ಮಠಕ್ಕೆ ಸುಮಾರು 1.30ಕ್ಕೆ ತಲುಪಿದೆವು. ಅಲ್ಲಿ ರುಚಿಯಾದ ಭೋಜನವನ್ನು ಏರ್ಪಾಡು ಮಾಡಲಾಗಿತ್ತು. ಸುಮಾರು ಮೂರು ಪಂಕ್ತಿಯಲ್ಲಿ ಎಲ್ಲರ ಊಟ ಆಯಿತು. ಅಲ್ಲೇ ಗುಡ್ಡದ ಮೇಲಿರುವ ಶಾರದಾಂಬ ದೇವಾಲಯಕ್ಕೆ ಭೇಟಿ ಕೊಟ್ಟು ದೇವಿಯ ದರ್ಶನದಿಂದ ಆನಂದ ಗೊಂಡೆವು. ಶ್ರೀ ಶಂಕರಾಚಾರ್ಯರ ಹಿಂದೆ ನಡೆದು ಬಂದು ಶಾರದಾದೇವಿಯು ನೆಲೆಗೊಂಡ ಸ್ಥಳ ಇದು. ಅರ್ಚನೆ, ಪೂಜೆಯ ನಂತರ ಛಾಯಾಚಿತ್ರಗಾರರಾದ ಶ್ರೀ ಎನ್.ಶಿವಕುಮಾರ್‌ರವರು ಸಮುದಾಯದವರ ಫೋಟೋ ತೆಗೆದರು. ನಂತರ ವಿರೂಪಾಕ್ಷಿಯ ವಿರೂಪಾಕ್ಷ ದೇವಾಲಯಕ್ಕೆ ಭೇಟಿಕೊಟ್ಟೆವು. ಪುರಾತನ ವಾದ ದೇವಸ್ಥಾನದ ಗರ್ಭಗುಡಿಯಲ್ಲಿ ಈಶ್ವರನ ಆತ್ಮಲಿಂಗ ಹಾಗೂ ಅತ್ರಿಮುನಿಗಳು ಸ್ಥಾಪಿಸಿದ ಪಚ್ಚೆಲಿಂಗ ಇರುವುದೇ ವಿಶೇಷ. ಇದೇ ಆವರಣದಲ್ಲಿ ದುರ್ಗಾದೇವಿ ದೇವಾಲಯವೂ ಇದೆ. ಪೂಜೆಯ ನಂತರ ಕ್ವಿಝ್ ಇರುತ್ತದೆಂದು ಸಂಘಟನೆಕಾರರು ತಿಳಿಸಿದ್ದರೂ ಬೆಳಕಿನ ಅಭಾವದಿಂದ ರದ್ದಾಯಿತು. ವಿಶೇಷವಾಗಿ ಪ್ರವಾಸಿಗರೆಲ್ಲರಿಗೂ ಅಚ್ಚರಿಯಾಗುವಂತೆ ಏರ್ಪಡಿಸಿದ್ದ ವಿವಿಧ ಬಗೆಯ ಚಾಟ್ಸ್ ಆದ ಪಾನಿಪುರಿ, ಮಸಾಲೆಪುರಿ, ಭೇಲ್‌ಪುರಿ ಮುಂತಾದವುಗಳು ಎಲ್ಲರನ್ನೂ ಆಕರ್ಷಿಸಿದಲ್ಲದೆ ಖುಷಿಯಾಗಿ ತಿಂದದ್ದು ಮರೆಯಲಾಗದ ಪ್ರವಾಸದ ಒಂದು ಅಂಗ. ರಾತ್ರಿಗಾಗಿ ಸಂಘದವರು ಮನೆಗೆ ಹೋಗಿ ಒಲೆ ಹಚ್ಚುವ ಬದಲು ಉಪ್ಪಿಟ್ಟನ್ನು ಡಬ್ಬಿಗಳಲ್ಲಿ ಕೊಟ್ಟಿದ್ದು ಎಲ್ಲರಿಗೂ ನೆಮ್ಮದಿ ಎನಿಸಿತು. ಒಟ್ಟಿನಲ್ಲಿ ಪ್ರವಾಸವು ಆಹ್ಲಾದಕರವಾಗಿ ಕೊನೆಗೊಂಡಿದ್ದು ಮತ್ತೊಮ್ಮೆ ಸಂಘವು ಏರ್ಪಡಿಸುವ ಪ್ರವಾಸದಲ್ಲಿ ಭಾಗವಹಿಸುವ ಆಸೆ ಚಿಗುರಿತು. ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಈ ಪ್ರವಾಸ ಏರ್ಪಡಿಸಿದ ಪ್ರತಿಯೊಬ್ಬರಿಗೂ ನಮ್ಮ ಬಸ್ಸಿನ ಪರವಾಗಿ ಅಭಿನಂದಿಸುತ್ತೇವೆ.


**ರಾಜಲಕ್ಷ್ಮೀ ರಾಮಕೃಷ್ಣ**
98442 15520
**ಛಾಯಾ ಭಗವಾನ್**
9980162364


# ನಂ ಬಸ್ - 'ಡಿ'

ಪ್ರತೀ ವರ್ಷದಂತೆ ಈ ವರ್ಷವೂ ನಮ್ಮ ಸಂಘ ಏರ್ಪಡಿಸಿದ್ದ 19.11.2017ರ ಪ್ರವಾಸ ಅತ್ಯದ್ಭುತವಾಗಿತ್ತು. ಈ ಸಲದ ವಿಶೇಷ ವೇನಂದರೆ ಕೇಳರಿಯದ ಪುರಾತನ ದೇವಾಲಯಗಳನ್ನು ನೋಡುವ ಭಾಗ್ಯ ನಮ್ಮದಾಗಿತ್ತು. ಇದಕ್ಕಾಗಿ ಪ್ರವಾಸಿಗರಾದ ನಾವು ಸಂಘಕ್ಕೆ ಅಭಾರಿಯಾಗಿದ್ದೇವೆ.

ಸಂಘದವರು ತಿಳಿಸಿದಂತೆ ಬೆಳಿಗ್ಗೆ 6.30ಕ್ಕೆ ಬಸವನಗುಡಿ ದ್ವಾರಕಾ ನಾಥ ಭವನದ ಬಳಿ ನಾವೆಲ್ಲಾ ಸೇರಿದ್ದವು. ಅಲ್ಲಿ ಎಸ್.ಆರ್.ಎಸ್.ನ ಎ, ಬಿ, ಸಿ, ಡಿ ಎಂಬ ನಾಲ್ಕು ಬಸ್ಸುಗಳಿದ್ದವು. ನಾವು ಪಟ್ಟಿಯ ಪ್ರಕಾರ "ಡಿ" ಬಸ್‌ನಲ್ಲಿ ಕೂರಬೇಕೆಂದು ತಿಳಿದು ಅದರಲ್ಲಿ ಕುಳಿತೆವು.

ಬಸ್ಸು 7 ಗಂಟೆಗೆ ಹೊರಟು ಮೊದಲು ನಾವು ನರಸಾಪುರದ 'ಕಾಮತ್ ಉಪಚಾರ್'ನಲ್ಲಿ ಚಹಾ, ಕಾಫಿ ಕುಡಿದ ನಂತರ 9.30ಕ್ಕೆ ಮುಳುಬಾಗಿಲು ತಲುಪಿದೆವು. ಅಲ್ಲಿ ಆಂಜನೇಯನ ದರ್ಶನ ಮಾಡಿ ಉಪಹಾರ ಮುಗಿಸಿ 10.45ಕ್ಕೆ ಕುರುಡುಮಲೆ ಕಡೆ ಹೊರಟೆವು. ಸುಮಾರು 12 ಗಂಟೆಯ ಹೊತ್ತಿಗೆ ಎಲ್ಲರಿಗೂ ಗಣಪನ ದರ್ಶನ ಆಯಿತು. ಕುರುಡುಮಲೆ ಗಣಪತಿಯ ವಿಶೇಷವೇನೆಂದರೆ, ಇದು ಸಾಲಿಗ್ರಾಮದ ಏಕ ಶಿಲೆಯಿಂದ ಮಾಡಿದ ಮೂರ್ತಿ. ತ್ರೇತಾಯುಗದಲ್ಲಿ ರಾಮನು ರಾವಣನನ್ನು ಸೋಲಿಸಲು ಈ ಗಣಪತಿಯನ್ನು ಪೂಜಿಸಿದ್ದನಂತೆ. ಹಾಗೆ ದ್ವಾಪರ ಯುಗದಲ್ಲಿ ಪಾಂಡವರು ಕುರುಕ್ಷೇತ್ರ ಯುದ್ಧಕ್ಕೆ ಮುನ್ನ ಈ ಗಣಪನನ್ನು ಆರಾಧಿಸಿದ್ದರಂತೆ. ಕಲಿಯುಗದಲ್ಲಿ 15ನೇ ಶತಮಾನದಲ್ಲಿ ಶ್ರೀ ಕೃಷ್ಣದೇವರಾಯನು ಈ ದೇವಾಲಯವನ್ನು ಕಟ್ಟಿಸಿದನೆಂದು ಇತಿಹಾಸ ಹೇಳುತ್ತದೆ. ಗೋಕರ್ಣದಲ್ಲಿ ಆತ್ಮಲಿಂಗ ಭೂಮಿಯಿಂದ ಎಳೆಯುವಾಗ ಒಂದು ಚೂರು ಇಲ್ಲಿ ಬಿತ್ತೆಂದು ಕಥೆ ಇದೆ. ಇಲ್ಲಿ ಏನು ಬೇಡಿದರೂ ಸಫಲಗೊಳ್ಳುತ್ತದೆಂದು ಭಕ್ತರ ನಂಬಿಕೆ.

ಮುಂದೆ ನಮ್ಮ ಪ್ರಯಾಣ ಕೊಲಾದೇವಿಯ "ಗರುಡನ" ದೇವಸ್ಥಾನದತ್ತ. ಇದರ ವಿಶೇಷತೆ ಏನೆಂದರೆ ಪ್ರಪಂಚದಲ್ಲಿಯೇ ಇದು ಏಕಮೇವಾದ್ವಿತೀಯ ಗರುಡ ದೇವಾಲಯ. ಗರುಡ ವಿಗ್ರಹದ ಎರಡೂ ಭುಜಗಳ ಮೇಲೆ ಸರ್ಪಗಳಿವೆ. ಇಲ್ಲಿ ಕಾಳಸರ್ಪ ದೋಷ, ಸರ್ಪ ದೋಷ ಇರುವವರಿಗೆ ವಿಶೇಷ ಪೂಜೆ ನಡೆಸಿ ಪ್ರಸಾದ ಕೊಡುತ್ತಾರೆ.

ಸುಮಾರು 1 ಗಂಟೆಗೆ ನಾವು ಆವನಿ ಶೃಂಗೇರಿ ಮಠಕ್ಕೆ ಹೊರಟೆವು. ಭೋಜನಾ ನಂತರ ನಾವು ಶಾರದಾಂಬ ದೇವಾಲಯಕ್ಕೆ ಹೊರಟೆವು. ಶಾರದಾದೇವಿಯನ್ನು ಬಹಳ ಸುಂದರವಾಗಿ ಅಲಂಕರಿಸಿದ್ದರು. ಸಂಜೆ ವಿರೂಪಾಕ್ಷಿಯ ವಿರೂಪಾಕ್ಷ ದೇವಾಲಯ ನೋಡಿದೆವು. ಅಲ್ಲಿ ಲಘು ತಿಂಡಿ ತಿಂದು ಬಸ್ ಹತ್ತಿದೆವು. ವಾಹನದಲ್ಲಿ ಅಂತ್ಯಾಕ್ಷರಿ ಮುಂತಾದ ನಾನಾ ವಿಧವಾದ ಕ್ರೀಡೆಗಳಲ್ಲಿ ನಮ್ಮ ಬಸ್‌ನವರು ರಂಜಿಸಿದರು.

ಸುಮಾರು 5.30ಕ್ಕೆ ಅಲ್ಲಿಂದ ಹೊರಟು 9 ಗಂಟೆಗೆ ದ್ವಾರಕಾನಾಥ ಭವನ ಬಳಿಗೆ ಬಂದರು. ಸಂಘದವರು ಬುತ್ತಿಯನ್ನು ರಾತ್ರಿಗೂ ಕಳುಹಿಸಿದ್ದರು.

ಒಟ್ಟಿನಲ್ಲಿ ಹೇಳಬೇಕೆಂದರೆ ಇದು ಅಪರೂಪದ ಅವಿಸ್ಮರಣೀಯ ಪ್ರವಾಸ. ನಮ್ಮ "ಡಿ" ಬಸ್‌ನ ಪರವಾಗಿ ಸಂಘದ ಎಲ್ಲಾ ಕಾರ್ಯಕಾರಿ ಸಮಿತಿಗೂ ನನ್ನ ಅನಂತಾನಂತ ವಂದನೆಗಳು.




**ಕೆ.ಆರ್.ನಾಗರತ್ನ ರಮೇಶನ್**
**9663874531**

# ಪ್ರವಾಸದ ಛಾಯಾಚಿತ್ರಗಳು


















# ಪ್ರವಾಸದ ಛಾಯಾಚಿತ್ರಗಳು












# ಪ್ರವಾಸದ ಛಾಯಾಚಿತ್ರಗಳು

ಸೋಮೇಶ್ವರ











# ಪ್ರವಾಸ – ಪಕ್ಷಿನೋಟ

ಬೃಹಚ್ಚರಣ ಸಂಘವು ತಾ॥ 19.11.2017ರಂದು ಭಾನುವಾರದಂದು ಪ್ರತೀ ವರ್ಷದಂತೆ ಈ ಬಾರಿಯೂ ಪ್ರವಾಸವನ್ನು ಕೈಗೊಂಡಿತ್ತು. ಕರ್ನಾಟಕದ ಪ್ರೇಕ್ಷಣೀಯ ಸ್ಥಳಗಳಾದ ಕೋಲಾರ ಜಿಲ್ಲೆಯ ಮುಳುಬಾಗಿಲಿನ ಆಂಜನೇಯ, ಕೂಡುಮಲೆಯ ಗಣಪತಿ, ಕೊಲದೇವಿಯ ಗರುಡ, ಆವನಿಯ ಶಾರದಾದೇವಿ, ಮತ್ತು ವಿರೂಪಾಕ್ಷಿಯ ವಿರೂಪಾಕ್ಷ ದೇವಸ್ಥಾನಗಳಿಗೆ ಸುಮಾರು 160 ಸದಸ್ಯರೊಂದಿಗೆ ಬೆಳಿಗ್ಗೆ ಬಸವನ ಗುಡಿಯ ದ್ವಾರಕಾನಾಥ ಭವನದಿಂದ ನಾಲ್ಕು ಬಸ್ಸುಗಳಲ್ಲಿ ಪ್ರವಾಸ ಆರಂಭಿಸಿತು. ಸಂಘದ ಕಾರ್ಯಕಾರಿ ಸಮಿತಿ ಸದಸ್ಯ ಶ್ರೀ ಗುಂಡಪ್ಪನವರು ವಾಹನಗಳಿಗೆ ಪೂಜೆ ನೆರವೇರಿಸಿದರು.

ಪ್ರವಾಸದಂದು ಕಾರ್ಯಕ್ರಮವು ಸುಗಮವಾಗಿ ನಡೆಯುವ ಉದ್ದೇಶದಿಂದ ಸಂಘದ ಕಾರ್ಯಕಾರಿ ಸಮಿತಿಯ ಸಭೆಯಲ್ಲಿ ಉಪ ಸಮಿತಿಯನ್ನು ಉಪಾಧ್ಯಕ್ಷ ಶ್ರೀ ಶಶಿಧರ್‌ರವರ ನೇತೃತ್ವದಲ್ಲಿ ರಚಿಸಲಾಗಿತ್ತು. ಇದರಲ್ಲಿ ಶ್ರೀಯುತರಾದ ಹೆಚ್.ಕೆ.ಶಶಿಧರ್, ಜಂಟಿ ಕಾರ್ಯದರ್ಶಿಯಾದ ವಿ.ಅರುಣ್, ಎಸ್.ಸಿ.ಶ್ರೀನಿವಾಸ್, ಕೆ.ಎಸ್.ಅನಂತ, ಗಣೇಶ್ ಶ್ರೀಧರ್‌ರವರು ಕಾರ್ಯ ನಿರ್ವಹಿಸಿದರು.

ಮುಳುಬಾಗಿಲಿನ ಆಂಜನೇಯನನ್ನು ಶ್ರೀ ವ್ಯಾಸತೀರ್ಥರು ಸ್ಥಾಪಿಸಿದ್ದು, ಇಲ್ಲಿ ದ್ವಾಪರದಲ್ಲಿ ಅರ್ಜುನನು ಪೂಜಿಸಿದ್ದನೆಂದು ಹೇಳುತ್ತಾರೆ. ಆಂಜನೇಯ, ಶ್ರೀನಿವಾಸ, ದೋಷ ಪರಿಹಾರಕ್ಕಾಗಿರುವ ಹಲ್ಲಿ ದರ್ಶನವಾದ ಮೇಲೆ ಕೂಡುಮಲೆ ಸಾಲಿಗ್ರಾಮ ಶಿಲೆಯ ಗಣಪತಿ ದರ್ಶನಕ್ಕಾಗಿ ಹೊರಟು, ಗಣಪತಿ ದೇವಸ್ಥಾನದಲ್ಲಿ ಸಂಘದ ಪರವಾಗಿ ಅರ್ಚನೆ ಮಾಡಿಸಿದರು. ಕೊಲಾದೇವಿಯಲ್ಲಿರುವ ಗರುಡ ಮತ್ತು ಶನಿದೇವರ ದೇವಾಲಯದಲ್ಲಿ ಸರತಿಯಲ್ಲಿ ನಿಂತು ಸದಸ್ಯರು ದರ್ಶನ ಪಡೆದರು. ತ್ರೇತಾಯುಗದಲ್ಲಿ ಸೀತಾಪಹರಣವಾದಾಗ ಜಟಾಯುವು ರಾವಣನೊಡನೆ ಹೋರಾಡಿ ಕೆಳಗೆ ಬಿದ್ದ ಜಾಗವೇ ಕೊಲಾದೇವಿ ಎಂಬ ಪ್ರತೀತಿ ಇದೆ. ಅಲ್ಲಿಂದ ಪ್ರಸಿದ್ಧ ಕ್ಷೇತ್ರವಾದ ಆವನಿಯತ್ತ ಪ್ರಯಾಣ. ಅಲ್ಲಿ ಶಾರದಾ ದೇವಿಯ ದರ್ಶನ, ಅರ್ಚನೆ ಮಾಡಿಸಿದರು. ಮಠದಲ್ಲೇ ಸದಸ್ಯರಿಗೆಲ್ಲಾ ಕಾಯಿ ಒಬ್ಬಟ್ಟು, ಬಜ್ಜಿಯೊಂದಿಗಿನ ಪ್ರಸಾದ ಭೋಜನವನ್ನು ಸಂಘವು ಸ್ಥಳೀಯರಾದ ಮಂಜುನಾಥ್ ಮತ್ತು ಶ್ರೀನಿವಾಸರ ಸಹಕಾರದಿಂದ ಅಚ್ಚುಕಟ್ಟಾಗಿ ಏರ್ಪಡಿಸಿದ್ದರು. ಶಾರದಾದೇವಿಯ ದೇವಾಲಯದ ಮೆಟ್ಟಿಲಿನ ಮೇಲೆ ಪ್ರವಾಸಿಗರ ಫೋಟೋ ತೆಗೆಯಲಾಯಿತು. ಅಲ್ಲಿಂದ



ಸಂಜೆ ವಿರೂಪಾಕ್ಷಿ ಕ್ಷೇತ್ರದ ವಿರೂಪಾಕ್ಷ ದೇವಾಲಯದಲ್ಲಿ ಆತ್ಮಲಿಂಗ ದರ್ಶನ, ಪೂಜೆ ನಡೆಯಿತು. ಒಂದೇ ಗರ್ಭಗುಡಿಯಲ್ಲಿ ಆತ್ಮಲಿಂಗ ಮತ್ತು ಅತ್ರಿ ಮುನಿಗಳು ಸ್ಥಾಪಿಸಿದ ಪಚ್ಚೆಲಿಂಗ ಇರುವುದು ಇಲ್ಲಿನ ವಿಶೇಷ. ಸಂಘದಿಂದ ವಿಶೇಷವಾಗಿ ಬಂಗಾರಪೇಟೆಯ ಭೇಲ್‌ಪುರಿ, ಮಸಾಲಾಪುರಿ, ಪಾನಿಪುರಿ ಚಾಟ್ ವ್ಯವಸ್ಥೆ ಆಗಿತ್ತು. ರಾತ್ರಿಗಾಗಿ ಉಪ್ಪಿಟ್ಟನ್ನು ಡಬ್ಬಿಗಳಲ್ಲಿ ಹಾಕಿ ಸದಸ್ಯರಿಗೆ ವಿತರಿಸಲಾಯಿತು.

ಕ್ಷೇತ್ರ ದರ್ಶನವಾದ ಮೇಲೆ ಬೆಂಗಳೂರಿನತ್ತ ಪ್ರಯಾಣ ಬೆಳೆಯಿತು. ನಾಲ್ಕು ಬಸ್ಸುಗಳು ಸರಿ ಸುಮಾರು ರಾತ್ರಿ 8.30ಕ್ಕೆ ದ್ವಾರಕಾನಾಥ ಭವನದ ಬಳಿ ತಲುಪಿತು. ಸದಸ್ಯರೆಲ್ಲಾ ಸಂತೋಷ ವ್ಯಕ್ತಪಡಿಸಿದರು. ಪ್ರತೀ ಬಸ್ಸಿಗೂ ಕ್ಯಾಪ್ಟನ್‌ಗಳನ್ನು ನೇಮಿಸಿದ್ದರು. ಬಸ್ಸುಗಳನ್ನು ಎ, ಬಿ, ಸಿ, ಡಿ ಎಂದು ಹೆಸರಿಸಿದ್ದರು. ಬಸ್ "ಎ"ಗೆ ಶ್ರೀ ವಿ.ಎಸ್.ಮಣಿ, ವಿ.ಅರುಣ್, ಬಿ.ಸುಬ್ರಹ್ಮಣ್ಯಂ, ಬಸ್ "ಬಿ"ಗೆ ಶ್ರೀಮತಿ ಸರಸ್ವತಿ ನಟರಾಜನ್, ಶ್ರೀ ಬಿ.ಎನ್.ಜಿ.ಪ್ರಸಾದ್, ಬಸ್ "ಸಿ"ಗೆ ಶ್ರೀ ಗುಂಡಪ್ಪ, ಎಸ್.ಸಿ.ಶ್ರೀನಿವಾಸ್, ಗಣೇಶ್ ಶ್ರೀಧರ್, ಮತ್ತು ಬಸ್ 'ಡಿ'ಗೆ ಶ್ರೀ ಹೆಚ್.ಕೆ.ಶಶಿಧರ್, ಎಸ್.ಸತ್ಯನಾರಾಯಣ್, ಕೆ.ಬಿ.ಎಸ್.ಶರ್ಮ, ಟಿ.ಎಸ್.ರಮೇಶನ್, ಕೆ.ಎಸ್.ಅನಂತ ಕ್ಯಾಪ್ಟನ್‌ಗಳಾಗಿ ಎಲ್ಲಾ ಪ್ರವಾಸಿಗರಿಗೆ ಎಲ್ಲಾ ರೀತಿಯ ಸಹಕಾರ ನೀಡಿದರು. ಪ್ರವಾಸದಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಸೋಮ ಸುಂದರರರವರ ಮೇಲ್ವಿಚಾರಣೆಯಲ್ಲಿ ಎಲ್ಲಾ ಕಾರ್ಯಕ್ರಮಗಳು ನಡೆದವು. ಕೊನೆಯಲ್ಲಿ ಅಧ್ಯಕ್ಷರು ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಪ್ರವಾಸ ಸುಗಮವಾಗಿ ನಡೆಯಲು ಸಹಕರಿಸಿದ ಪ್ರತಿಯೊಬ್ಬರಿಗೂ ವಂದನೆ ಸಲ್ಲಿಸಿದರು.




**ಲಲಿತಾ ರಮೇಶ**
**9945199637**








# ಪ್ರವಾಸ - ಪಕ್ಷಿನೋಟ

ಸಂಘದ ಒಂದು ದಿನದ ಪ್ರವಾಸದಲ್ಲಿ ಕಾರಣಾಂತರಗಳಿಂದ ಇದುವರೆಗೂ ಪಾಲ್ಗೊಂಡಿರಲಿಲ್ಲ. ಕಳೆದ ಎರಡು ವರ್ಷಗಳ ಪ್ರವಾಸಗಳ ವರದಿಗಳನ್ನೋದಿದಾಗ ಎಂತಹ ಅವಕಾಶಗಳನ್ನು ಕಳೆದುಕೊಂಡೆನಲ್ಲಾ ಎನ್ನಿಸುತ್ತಿತ್ತು. ಈ ವರ್ಷ ಕೋಲಾರ ಜಿಲ್ಲೆಯ ಪುಣ್ಯ ಕ್ಷೇತ್ರಗಳ ಪ್ರವಾಸ ಪ್ರಕಟವಾದಾಗ ನನ್ನಾಕೆ ನಳಿನಿ ಹಾಗೂ ನನಗಾಗಿ ಎರಡು ಸೀಟುಗಳನ್ನು ಕಾದಿರಿಸಿದ್ದಾಯಿತು.

ಭಾನುವಾರ ನಸುಕಿನಲ್ಲಿಯೇ ತಯಾರಾಗಿ ಮನೆಗೆ ಹತ್ತಿರವೇ ಇದ್ದ ಹೊರಡುವ ಸ್ಥಳವನ್ನು ತಲುಪಿದೆವು. ನಾಲ್ಕು ಬಸ್‌ಗಳ ಆಗಮನದ ನಂತರ ಹೊರಡುವ ಮುನ್ನಿನ ತಯಾರಿಯಲ್ಲಿ ಯಥಾಸ್ಥಿತಿ ಕೈಗೂಡಿಸಿ ಅಶೋಕ್, ಅರುಣ್, ಟಿ.ಎಸ್. ಮಣಿ ಹಾಗೂ ಈಶ್ವರನ್ ಅಲ್ಲದೆ ಇತರ ಬಂಧು ಮಿತ್ರರೊಡಗೂಡಿ ಮೊದಲ ಬಸ್ಸನ್ನೇರಿಕೊಂಡು ಪ್ರಯಾಣ ಬೆಳೆಸಿದೆವು. ಮಾರ್ಗ ಮಧ್ಯದಲ್ಲಿ ಸನ್ಮಿತ್ರ ಶ್ರೀ ವಿ.ಎಸ್. ಮಣಿ ಕರ್ನಲ್ ರಾಜನ್ ಮತ್ತವರ ಪರಿವಾರ ವರ್ಗದವರನ್ನು ಜೊತೆಗೂಡಿಸಿಕೊಂಡು ಮುಂದುವರಿದೆವು.

ಹೊಸಕೋಟೆಯನ್ನು ದಾಟಿದ ನಂತರ ನಾಲ್ಕೂ ಬಸ್‌ಗಳು 'ಕಾಮತ್ ಉಪಚಾರ್'ಕ್ಕಾಗಿ ನಿಂತೆವು ಹೋಟೆಲ್‌ಗಳ ಅಂಗಳದಲ್ಲಿ ಹಬೆಯಾಡುವ ಬಿಸಿಬಿಸಿ ಕಾಫಿಯನ್ನು ಸವಿಯುತ್ತಾ ಒಂದಷ್ಟು ಹರಟಿದೆವು. ಸಾಕಷ್ಟು ಸೆಲ್ಫಿಗಳಾದ ಮೇಲೆ ನಾಲ್ಕು ಬಸ್‌ಗಳ ಕ್ಯಾರವಾನ್ ಮುಂದುವರೆಯಿತು.

ನನ್ನ ಮೆಚ್ಚಿನ ಲೇಖಕರಲ್ಲೊಬ್ಬರಾದ ಸನ್ಮಾನ್ಯ ಡಿ.ವಿ.ಜಿಯವರ 'ಜ್ಞಾಪಕ ಚಿತ್ರಶಾಲೆ'ಯಲ್ಲಿ ಮುಳಬಾಗಿಲ ಶ್ರೀಮದಾಂಜನೇಯ ಸ್ವಾಮಿಯ ಉಲ್ಲೇಖವಿರುವುದನ್ನು ಬಲ್ಲ ನನಗೆ ಆ ಕ್ಷೇತ್ರವನ್ನು ಸಂದರ್ಶಿಸಬೇಕೆಂದು ಇದ್ದ ಇಚ್ಛೆ ಅಂದು ನೆರವೇರಿತು. ಸಮೀಪದ ಛತ್ರದಲ್ಲಿ ರುಚಿಕರವಾದ ಬಿಸಿಬಿಸಿ ಉಪಹಾರವನ್ನು ತೀರಿಸಿಕೊಂಡು ಸ್ವಾಮಿಯ ದರ್ಶನ ಲಾಭ ಪಡೆದುಕೊಂಡೆವು.

ಪುಣ್ಯ ಕ್ಷೇತ್ರಗಳಲ್ಲಿ ಪ್ರತಿಷ್ಠಾಪನೆಗೊಂಡಿರುವ ದೇವತಾ ಮೂರ್ತಿಗಳ ದೈವಿಕ ಸೌಂದರ್ಯ, ಅವುಗಳ ಸಾಲಂಕೃತ ಶೋಭೆ ಇವುಗಳಿಗಿಂತ ಹೆಚ್ಚಾಗಿ ನಾನು ಗುರುತಿಸುವುದು ಅಲ್ಲಿನ ಶಾಂತ ಪರಿಸರ, ಅವುಗಳಿಂದ ದೇಹ, ಮನಸ್ಸುಗಳ ಮೇಲಾಗುವ ಧನಾತ್ಮಕ ಪರಿಣಾಮಗಳು. ಮುಳಬಾಗಿಲು, ಕುರುಡುಮಲೈ, ಕೋಲಾದೇವಿ, ಆವಣಿ ಹಾಗೂ ವಿರೂಪಾಕ್ಷಿ ಕ್ಷೇತ್ರಗಳಲ್ಲಿ ನಾನು ಗುರುತಿಸಿ ಅನುಭವಿಸಿದ್ದು ಇದನ್ನೇ. ಅದರಲ್ಲಿಯೂ ಆವಣಿಯ ಶ್ರೀ ಶಾರದಾದೇವಿಯ ದೇವಾಲಯ ಮತ್ತು ವಿರೂಪಾಕ್ಷಿ ದೇವಾಲಯ ಸಂಕೀರ್ಣದಲ್ಲಿನ ಕ್ಷೇತ್ರ ಮಹಿಮೆಯು ಅಲ್ಲಿನ ಶುದ್ಧ ಹವೆಯೊಡನೆ ಮಿಳಿತವಾಗಿ ನನಗೆ ವಿಶಿಷ್ಟ ಅನುಭವವನ್ನು ನೀಡಿದವು. ಆ ಸ್ಥಳಗಳಲ್ಲಿಯೇ ವಾಸಿಸುವವರು ಪುಣ್ಯವಂತರು!

ಪುಣ್ಯ ಕ್ಷೇತ್ರಗಳ ಭೇಟಿಯ ಸಮಯದಲ್ಲಿ ಅಲ್ಲದೇ ಬಸ್‌ನಲ್ಲಿ ಕುರುಕಲು ತಿಂಡಿಗಳ ನಡುವೆ ಬಂಧುಮಿತ್ರರೊಡನೆ ಮಾತುಕತೆ, ಸಲ್ಲಾಪ, ಹರಟೆಗಳು ಯಥೇಚ್ಛವಾಗಿ ಸಾಗಿ ದಾರಿ ಸವೆದುದೇ ತಿಳಿಯಲಿಲ್ಲ. ಈ ಸಂದರ್ಭದಲ್ಲಿ ನಮ್ಮ ಸಮುದಾಯದ ಕೆಲವರನ್ನು ಹೊಸದಾಗಿ ಪರಿಚಯ ಮಾಡಿಕೊಂಡೆವು. ಜೊತೆಗೆ ಹಳೆಯ ಪರಿಚಯದ ನವೀಕರಣವೂ ಆಯಿತು! ಮುಂದಿನ ಸೀಟಿನ ಹದಿನೆಂಟರ ಹರೆಯದ ಹುಡುಗನ ಜೊತೆಗಿನ ಚರ್ಚೆಯಲ್ಲಿ ಬಿಟ್‌ಕಾಯಿನ್ ಬಗ್ಗೆ ಒಂದಷ್ಟು ಜ್ಞಾನಾರ್ಜನೆಯೂ ಆಯಿತು.

ಸಂಘದ ಪ್ರವಾಸ ಕಾರ್ಯಕ್ರಮಗಳಲ್ಲಿ ಎದ್ದುಕಾಣುವ ಅಂಶವೆಂದರೆ, ಸಣ್ಣಪುಟ್ಟ ವಿಷಯಗಳಿಗೂ ಗಮನಕೊಟ್ಟು ಶ್ರದ್ಧೆಯಿಂದ ವ್ಯವಸ್ಥೆಗೊಳಿಸುವ ಪರಿ. ಪ್ರವಾಸದ ತಯಾರಿಗೆಂದೇ ರಚಿಸಲ್ಪಟ್ಟ ಉಪಸಮಿತಿಯ ಪ್ರವಾಸಿ ಸ್ಥಳಗಳಿಗೆ ಮುಂಚಿತವಾಗಿ ಭೇಟಿ ನೀಡಿ ತಂಗುದಾಣ, ಊಟೋಪಚಾರ, ದೇವಸ್ಥಾನಗಳಲ್ಲಿನ ಪೂಜಾ ವೇಳೆಗಳು, ಕೈಂಕರ್ಯದ ವಿವರಗಳು ಇತ್ಯಾದಿಗಳ ಬಗ್ಗೆ ವಿವರವಾಗಿ ಚರ್ಚಿಸಿ ಅಚ್ಚುಕಟ್ಟಾಗಿ ವ್ಯವಸ್ಥೆಗೊಳಿಸುವ ರೀತಿ ಮೆಚ್ಚುವಂಥದ್ದು. ನಮ್ಮನ್ನು ಕೊಂಡೊಯ್ಯುವ ಬಸ್‌ಗಳಿಗಾಗಿ ಪಾರ್ಕಿಂಗ್ ಸ್ಥಳ, ಕಾಲಾವಕಾಶಗಳಂಥ ವಿವರಗಳಿಗೂ ಗಮನ ಕೊಡುವ ಉಪಸಮಿತಿಯ ಕಾರ್ಯಕ್ಷಮತೆ ಇಂಪ್ರೆಸಿವ್! ಈ ರೀತಿಯ ಪ್ರವಾಸಗಳನ್ನು ಕೈಗೊಂಡಾಗ ಆಯೋಜಕರು ಪ್ರಾಮಾಣಿಕವಾಗಿ ಎಷ್ಟೇ ಶ್ರಮಿಸಿದರೂ ಸಣ್ಣ ಪುಟ್ಟ ಕುಂದುಕೊರತೆಗಳು ಉಂಟಾಗಬಹುದು. ಅವುಗಳನ್ನು ಗಮನದಲ್ಲಿ ಇಟ್ಟುಕೊಂಡು ವಿಮರ್ಶಿಸಿದರೂ ಈ ಪ್ರವಾಸ ಯಶಸ್ವಿಯಾಗಿ ಜರುಗಿತು ಎನ್ನಬಹುದು.



✍ ಸುಬ್ರಹ್ಮಣ್ಯಂ ಬಿ.
9449869667



ಪ್ರವಾಸದ ಉಪಸಮಿತಿ ಹಾಗೂ ಪ್ರವಾಸಕ್ಕೆ ವಿಶೇಷ ಸಹಕಾರ ನೀಡಿದ ಸದಸ್ಯರು

# ಮಾತು

ಭಗವಂತನ ಕಲಾಕೌಶಲ್ಯಗಳಲ್ಲಿ ಬಾಯಿಯು ಮನುಷ್ಯನ ಮುಖ್ಯ ಅಂಗವಾಗಿದೆ. 'ಬಾಯಿ' ಎಂಬ ಅಂಗ ಮಾತನಾಡಲು ಮತ್ತು ಆಹಾರ ಸೇವಿಸಲೂ ಉಪಯೋಗವಾಗುತ್ತದೆ. ಬಾಯಿಗೂ ಮತ್ತು ಮೆದುಳಿನ ಬುದ್ದಿಗೂ ನಿಕಟ ಸಂಬಂಧವಿದೆ. ಅಂದರೆ, ಮನಸ್ಸಿನಿಂದ ಯೋಚನೆಗಳು ಮನುಷ್ಯನಿಗೆ ಬಂದರೆ, ತಾನು ಅದನ್ನು ಸಮಯೋಚಿತವಾಗಿ ಮಾತಿನಲ್ಲಿ ಅಳವಡಿಸಿ ಕೊಳ್ಳುತ್ತಾನೆ. ಕೆಲವು ಜನರು ಸ್ಪಷ್ಟವಾಗಿ ಮನಸ್ಸು ಬಿಚ್ಚಿ ಮಾತನಾಡುತ್ತಾರೆ. ಇನ್ನೂ ಕೆಲವರು, ವಿಷಯಗಳನ್ನು ಬಚ್ಚಿಟ್ಟು ಒಳಗೊಂದು, ಹೊರಗೊಂದು ಎಂಬಂತೆ ಮಾತನಾಡುತ್ತಾರೆ. ಇನ್ನೂ ಹಲವರು ಮಿತ ಭಾಷಿಗಳು. ಇವರು ಅತಿ ಹೆಚ್ಚಿನ ವಿದ್ವಾಂಸರಾಗಿರಬಹುದು ಅಥವಾ ವಿದ್ಯಾವಿಹೀನರಾಗಿರಬಹುದು. ಮಾತು ಬರದೇ ಇರುವವರು "ಮೂಕರೆಂದು"; ಕೈ ಸನ್ನೆ, ಬಾಯಿ ಸನ್ನೆ ಮಾಡಿ ಮನಸ್ಸಿನಲ್ಲಿರುವುದನ್ನು ಮಿಕ್ಕವರಿಗೆ ತಿಳಿಸಲು ಬಯಸುತ್ತಾರೆ. ಇತ್ತೀಚಿನ ಪ್ರಯೋಗಗಳಿಂದ ಅವರ ಸ್ಥಿತಿಗತಿಗಳು ಉತ್ತಮವಾಗುವ ನಿರೀಕ್ಷೆಗಳು ಕಾಣಬರಲಿದೆ.

ಮನುಷ್ಯನನ್ನು ಬಿಟ್ಟರೆ, ಮಿಕ್ಕ ಪ್ರಾಣಿ, ಪಕ್ಷಿಗಳಿಗೆ ಮಾತು ಬರುವುದಿಲ್ಲ. ಆದರೂ ಕೆಲವು ಪ್ರಾಣಿ ಪಕ್ಷಿಗಳು ಮನುಷ್ಯರನ್ನು ಅನುಕರಿಸಲು ಪ್ರಯತ್ನ ಪಡುತ್ತವೆ. ಮನೆಯಲ್ಲಿ ಸಾಕಿದ ಪ್ರಾಣಿ ಪಕ್ಷಿಗಳು, ತಮ್ಮನ್ನು ಸಾಕುವ ಯಜಮಾನರ ಭಾಷೆಗಳನ್ನು ಅರ್ಥ ಮಾಡಿಕೊಂಡು ಅದರಂತೆ ಪ್ರತಿಕ್ರಿಯೆ ನಡೆಸುವುದು ಎಲ್ಲರಿಗೂ ತಿಳಿದ ವಿಷಯ.

ಆದಿಕಾಲದಿಂದಲೂ ಜನರು ಬೇರೆ ಬೇರೆ ದೇಶಗಳಲ್ಲಿ ಬೇರೆ ಬೇರೆ ಭಾಷೆಗಳನ್ನು ಮಾತನಾಡುತ್ತಾರೆ. ಪ್ರಪಂಚವು ವಾಯು ಪ್ರಯಾಣ ಮತ್ತು ಇತರ ಸೌಲಭ್ಯಗಳಿಂದ ಸಂಕುಚಿತವಾಗುತ್ತಿರುವುದರಿಂದ, ಜನರು ವಲಸೆ ಹೋಗುವುದು ಹೆಚ್ಚಾಗುತ್ತಿದೆ. ಅಂದರೆ ಬೇರೆ ದೇಶದ ಒಂದು ಅಥವಾ ಹೆಚ್ಚು ಭಾಷೆಗಳನ್ನು ಕಲಿತು ಮಾತನಾಡಬೇಕಾಗುತ್ತದೆ. ಇದರಿಂದ ತಿಳಿಯುವುದೇನೆಂದರೆ, "ಮಾತು" ಭಾಷೆಯ ಮೂಲಕ ಬೇರೆಯವರಿಗೆ ಅರ್ಥವಾಗುವಂತೆ ಹೊರ ಬೀಳುತ್ತದೆ.

ಮಾತು ಮನುಷ್ಯನ ಗುಣವನ್ನು ತೋರ್ಪಡಿಸುತ್ತದೆ. ನಯ, ವಿನಯ, ಭಯ, ಭೀತಿ, ಆಕ್ರೋಶ, ಕೋಪ ಇವೆಲ್ಲವೂ ಮಾತಿನ ಮೂಲಕ ತಿಳಿಯುತ್ತದೆ. ದೇವರನ್ನು ನಾವು ಹೇಗೆ ವಿಧವಿಧ ದೃಷ್ಟಿಯಿಂದ ನೋಡುತ್ತೇವೋ, ಹಾಗೆಯೇ ಮಾತು ಕೂಡ ವಿವಿಧ ಲಕ್ಷಣಗಳಲ್ಲಿ ಬಾಯಿಯ ಮೂಲಕ ಬರುತ್ತದೆ. ಮಾತು ಎಂಬುವುದು ಸೂಕ್ಷ್ಮವಾದ ಅಂಶ. ಒಂದು ಸಾರಿ ಮಾತನಾಡಿದರೆ ಅದನ್ನು ಹಿಂದೆ ತೆಗೆದುಕೊಳ್ಳಲಾರದು. ಆದ್ದರಿಂದ, ಪ್ರತಿಯೊಬ್ಬರು ಮಾತನಾಡುವ ಮೊದಲು 'ಯಾವುದು ಸರಿ', 'ಯಾವುದು ತಪ್ಪು' ಎಂದು ವಿಮರ್ಶಿಸಿ ಮಾತನಾಡುವುದನ್ನು ಕಲಿಯಬೇಕು. ಇದಕ್ಕೆ ವಿದ್ಯಾರ್ಜನೆ ಮತ್ತು ಪ್ರಪಂಚ ಜ್ಞಾನ ಮುಖ್ಯ. ಕೋಪ ತಾಪಗಳಿಂದ ಮಾತಿನ ಮೂಲಕ ಅನಾಹುತಗಳು ನಡೆದಿವೆ, ನಡೆಯುತ್ತಲಿವೆ. ಮಾತಿನ ಪ್ರಾಮುಖ್ಯತೆ ಎಷ್ಟು ಹೆಚ್ಚೆಂದರೆ ದೇಶಗಳ ಮುಖ್ಯಸ್ಥರೂ, ಆಳುವವರೂ ಆಯಾ ದೇಶಗಳ ಜನರ ಅಭ್ಯುದಯಕ್ಕಾಗಿ, ಬೇರೆ ದೇಶದವರೊಡನೆ ಸಹೃದಯ ಮಾತುಗಳಿಂದ ಮೈತ್ರಿಯುತವಾಗಿ ವ್ಯವಹಾರಗಳನ್ನು ನಡೆಸಬೇಕಾಗುತ್ತದೆ. ಮಾತು ಸೌಹಾರ್ದತೆಯನ್ನು ಹೆಚ್ಚಿಸುವ ಒಂದು ಬಲವಾದ ಶಕ್ತಿ. ಮಗುವಾದಾಗಲಿಂದ, ಮಧ್ಯವಯಸ್ಸು ಮತ್ತು ವೃದ್ಧಾಪ್ಯದವರಿಗೆ ಮಾತಿನ ಶೈಲಿ ಬದಲಾಗುತ್ತಾ ಬರುತ್ತದೆ. ಸುತ್ತಲಿನ ವಾತಾವರಣ ವಿಶೇಷದಿಂದ, ಮಗುವು ತನ್ನ ಮಾತೃಭಾಷೆಯನ್ನು ಮಾತನಾಡಲು ಪ್ರಯತ್ನಿಸುತ್ತದೆ. ಇದು ಅತ್ಯಂತ ಆಕರ್ಷಕವಾದ ನೋಟ. ಮುದ್ದಾದ ಶಬ್ದಗಳು, ತೊದಲಿನ ನುಡಿಗಳು ಕೇಳಲು ಚೆನ್ನ. ಅದೇ ಮಗುವು ಸ್ವಲ್ಪ ದೊಡ್ಡದಾದರೆ, ವಿದ್ಯಾಭ್ಯಾಸದ ಕಡೆಗೆ ಗಮನ ಕೊಡಬೇಕಾಗುತ್ತದೆ. ಇಲ್ಲಿ ಮಾತಿನ ಪ್ರಾಮುಖ್ಯತೆ ಜಾಸ್ತಿಯಾಗುತ್ತದೆ. ವಿದ್ಯಾಭ್ಯಾಸ ಮುಗಿದು ಬೇರೆ ಬೇರೆ ರೀತಿಯಲ್ಲಿ ಜವಾಬ್ದಾರಿ ಪಡೆದರೆ, ಮಾತಿನ ವಿಶೇಷತೆ ಹೆಚ್ಚುತ್ತದೆ. ಹೀಗೆ, ಮನುಷ್ಯನ ಕೊನೆಯ ಗಳಿಗೆವರೆಗೂ ಮಾತು ಪೂರ್ಣ ಅರ್ಥವನ್ನು ಹೊಂದುತ್ತದೆ ಮತ್ತು ಕೊಡುತ್ತದೆ.

ಮಾತಿನಲ್ಲೂ ಒಂದು ರೀತಿ, ಶೈಲಿ ಮತ್ತು ವಿಧಾನವಿದೆ. ಇದು ಅರ್ಥಪೂರ್ಣವಾಗಿರಬೇಕು. ಆಡಳಿತ ಮಟ್ಟದಲ್ಲಿ, ವ್ಯಾಪಾರ ವ್ಯವಹಾರಗಳಲ್ಲಿ ಮತ್ತು ಇತರ ಎಲ್ಲಾ ಕ್ಷೇತ್ರಗಳಲ್ಲೂ ಅರ್ಥಪೂರ್ಣ ಮಾತು ಮುಖ್ಯ. ಮಾತನಾಡಲು ಇಬ್ಬರಾದರೂ ಬೇಕು. ಒಬ್ಬೊಬ್ಬರೇ ಮಾತನಾಡಿ ಕೊಂಡರೆ 'ಬುದ್ಧಿಹೀನ'ರೆಂದು ಜನರು ನಗುವ ಪ್ರಸಂಗ ಬರುತ್ತದೆ. ಭಾಷಣಕಾರರು ಒಂದೋ ಅಥವಾ ಹೆಚ್ಚಾದ ವಿಷಯಗಳಲ್ಲಿ ಪಾಂಡಿತ್ಯವನ್ನು ಪಡೆದು ಮಾತನಾಡಬೇಕಾಗುತ್ತದೆ. ಗಂಟೆಗಟ್ಟಳೆ ಕೆಲವರು ಮಾತನಾಡಿ ಪ್ರಪಂಚದಲ್ಲೇ ದಾಖಲೆಗಳನ್ನು ಮಾಡಿದ್ದಾರೆ. ಇದು ವಿಶೇಷವಾದ ಸಂಗತಿ.

ಅಂತೂ, ಒಂದೇ ಮಾತಿನಲ್ಲಿ ಹೇಳುವುದಾದರೆ, ಮಾತಿನ ವೈಶಿಷ್ಟ್ಯ ಮತ್ತು ಶೈಲಿ ಮಾತುಗಾರರ ಸಾಧನವಾಗಿದೆ. ಅದನ್ನು ಸದುಪಯೋಗಿಸಿ ಕೊಳ್ಳುವುದು ಅವರವರ ಜವಾಬ್ದಾರಿ ಮತ್ತು ಸಾಮರ್ಥ್ಯ. ಷೇಕ್ಸ್‌ಪಿಯರ್ ಬರೆದಿರುವ ಹಾಗೆ "ಮಿಕ್ಕವರ ಮಾತನ್ನು ಕಿವಿಗೊಟ್ಟು ಕೇಳು, ಆದರೆ ಮಿತ ಭಾಷೆಯಲ್ಲಿ ಉತ್ತರಿಸು. ಕೆಲವರು ಆಕ್ಷೇಪಿಸುವುದನ್ನು ತಪ್ಪಾಗಿ ತಿಳಿಯದೆ, ನಿನ್ನ ಸ್ವಂತ ಅಭಿಪ್ರಾಯವನ್ನು ಅರ್ಪಿಸು" ಎಂತಹ ಮುತ್ತಿನಂತಹ ಮಾತುಗಳು, ಅಲ್ಲವೇ. ಅಂದರೆ ಮಾತಿಗೆ ಶಕ್ತಿಯಿದೆ, ಅರ್ಥಪೂರ್ಣತೆ ಇದೆ ಮತ್ತು ಕೊನೆಯೂ ಇದೆ.



✍ ಎಂ.ಪಿ. ರಂಗನಾಥನ್
9480861849

## ನಮಿಸುವೆನು ಓ ಗುರುವೇ

ಭಾರತದ ಬಾನಲ್ಲಿ ಮಿಂಚಾಗಿ ಬಂದೆ
ಮನೆಮನೆಗು ಯೋಗದಾ ಬೆಳಕ ತಂದೆ
ಆರೋಗ್ಯ ಭಾಗ್ಯವನು ಎಲ್ಲರಿಗು ನೀಡಿ
ಉದ್ಧರಿಸಿದೆ ಜನರನ್ನು ತಿದ್ದಿ ತೀಡಿ.

ಸ್ವದೇಶೀ ವಸ್ತುಗಳ ಉತ್ಪಾದನೆ ಮಾಡುತಲಿ
ಬಹುರಾಷ್ಟ್ರೀಯ ಕಂಪನಿಗಳ ಹೊರಗಟ್ಟುತಲಿ
ತುಂಬಿಸಿದೆ ಎಲ್ಲೆಡೆಯು ಪತಂಜಲಿಯ ಸರಕು
ಎಲ್ಲಾ ಮಳಿಗೆಗಳಲ್ಲು ನಿನ್ನದೇ ಝುಲಕು

ಭಾರತ ಸಂಸ್ಕೃತಿ ಬಿಂಬಿಸುವ ನೇತಾರನಾದೆ
ಉತ್ಕಟ ದೇಶಪ್ರೇಮವ ಜನಗಳಲಿ ತುಂಬಿದೆ
ಆಧ್ಯಾತ್ಮದೊಡನೆ ಸಮಾಜಸೇವೆಯಾ ಚಿಂತೆ
ಹೊಂದುತಲಿ ಮೆಚ್ಚಿನಾ ಗುರುವಾಗಿ ನಿಂತೆ .

ಹೋಲಿಕೆಗೆ ಯಾರಿಲ್ಲ ನಿನಗೆ ನೀನೆ ಸಾಟಿ
ನಮ್ಮೆಲ್ಲರ ನಮನವಿದೊ ಕೋಟಿ ಕೋಟಿ
ಆ ದೇವನು ನಮಗೆ ನೀಡಿದಾ ವರವೆ
ತಲೆಬಾಗಿ ನಮಿಸುವೆನು ಓ ಗುರುವೆ.



ಬಿ.ಈ. ಸೀತಾಲಕ್ಷ್ಮಿ
ಬೆಂಗಳೂರು.

# ಮಾತು

'ಕುಲವ ನಾಲಿಗೆಯರುಹಿತು' – ಎಂಬ ರಾಘವಾಂಕ ಮಹಾಕವಿಯ ವಚನದಂತೆ ಪ್ರತಿಯೊಬ್ಬ ವ್ಯಕ್ತಿಯ ಯೋಗ್ಯತೆ ಅವನ ಮಾತಿನಿಂದ ಹೊರ ಹೊಮ್ಮುತ್ತದೆ. ದೇಹದ ಯಾವುದೇ ಭಾಗ ಮುಪ್ಪಿನಿಂದ ಶಿಥಿಲವಾದರೂ ನಾಲಿಗೆ ಮಾತ್ರ ಚುರುಕಾಗಿಯೇ ಇರುತ್ತದೆ. ಹುಲಿಯನ್ನಾದರೂ ಪಳಗಿಸಬಹುದು, ಮನುಷ್ಯನ ನಾಲಿಗೆಯನ್ನು ಮಾತ್ರ ಪಳಗಿಸಲಾಗದು ಎಂದು ಹಿರಿಯರು ಹೇಳುವ ಮಾತಿದೆ. ಒಡೆದ ಮೊಟ್ಟೆಯಂತೆ ಆಡಿದ ಮಾತನ್ನು ಹಿಂತೆಗೆದುಕೊಳ್ಳಲಾಗದೆಂದು ಒಂದು ಆಂಗ್ಲ ಗಾದೆಯಿದೆ. "ಮಾತಿನಿಂ ನಗೆ ಮತಿಯು, ಮಾತಿನಿಂ ಹಗೆ ಕೊಲೆಯು, ಮಾತಿನಿಂ ಸರ್ವಸಂಪದವು, ಲೋಕಕ್ಕೆ ಮಾತೇ ಮಾಣಿಕ್ಯ" ಎಂಬುದು ಸರ್ವಜ್ಞನ ವಚನ. ಒಳ್ಳೆ ಮಾತಿನಿಂದ ಸ್ವರ್ಗ ಸುಖವು ಸಿಕ್ಕೀತು, ಕಟು ವಚನದಿಂದ ನರಕವಾಸವು ಲಭಿಸೀತು. ಚುಚ್ಚು ಮಾತು ಎಲ್ಲಾ ಸುಖ, ಸಂತೋಷವನ್ನು ಹಾಳು ಮಾಡಿ ಬದುಕುವ ಆಸೆಗೇ ಮುಳುವಾದ ನಿರ್ದೇಶನಗಳಿವೆ. "ಮಾತು ಆಡಿದರೆ ಹೋಯ್ತು, ಮುತ್ತು ಒಡೆದರೆ ಹೋಯ್ತು." ಆದುದರಿಂದ ನಮ್ಮ ಮಾತಿನ ಓಟಕ್ಕೆ ವಿವೇಕದ ಕಡಿವಾಣ ಹಾಕುವುದು ಅನಿವಾರ್ಯ. "ಮಾತಾಡೆ ಮನಕೆ ಮುನಿಸಕ್ಕು" ಎಂದು ಸರ್ವಜ್ಞ ಹೇಳುತ್ತಾನೆ. ಈ ನಾಲಿಗೆ ಬಾಯಿಯಿಂದ ಹೊರಬಂದು ಬಿರುನುಡಿಯನ್ನಾಡಿ ಒಳಗೆ ಸುಖವಾಗಿ ಅಡಗಿಕೊಳ್ಳುತ್ತದೆ. ಕಪಾಳ ಮೋಕ್ಷವಾದರೆ ಹಲ್ಲುಗಳು ಮುರಿಯುತ್ತವೆ. ಅಂದರೆ ಬಾಯಿ ಮಾಡಿದ ಕೃತ್ಯಕ್ಕೆ ಹಲ್ಲುಗಳಿಗೆ ಶಿಕ್ಷೆ. ಇದೇ ಮಾತಿನ ದುಷ್ಪರಿಣಾಮ. ಹಾಗೆಯೇ ಹಿತವಾದ ಮಾತನ್ನಾಡುವುದು ಸುಲಭವಲ್ಲ ಎಂಬುದು ಸಂಸ್ಕೃತದ ಆರ್ಯೋಕ್ತಿ. ಒಡಲಿಗೆ ಹಿತವಾದ ಔಷಧಿ ಕಹಿಯಾಗಿರುವಂತೆ ಹಿತವಾದ ಮಾತು ರುಚಿಸುವುದು ಕಡಿಮೆ. ಆರೋಗ್ಯ ಸಾಧನೆಗಾಗಿ ಸಿಹಿ ಲೇಪಿಸಿದ ಕಹಿ ಗುಳಿಗೆ ತಿನ್ನುವಂತೆ ಇತರರ ಮನಸ್ಸಿಗೆ ನೋವಾಗದಂತೆ ಸವಿಯಾದ ಮಾತುಗಳನ್ನಾಡಿ ವಿಷಯ ಮನವರಿಕೆ ಮಾಡಬೇಕು. ಕಟೋಕ್ತಿಗಳ ಪರಿಣಾಮವಾಗಿ ಎಷ್ಟೋ ಕುಟುಂಬಗಳು ಸರ್ವನಾಶವಾದ ಉದಾಹರಣೆಗೆ ಕೊರತೆಯಿಲ್ಲ.

ಮಂಥರೆಯ ನಾಲಿಗೆಯಿಂದ ಹೊರಳಿದ ಮಾತುಗಳೇ ರಾಮಾಯಣದ ಕಥಾನಕದ ಮೂಲವಲ್ಲವೇ? ದುರ್ಯೋಧನನ ಅಹಂಕಾರದ ಮಾತುಗಳ ಪರಿಣಾಮವಾಗಿ ಧೃತರಾಷ್ಟ್ರ ಕುಲವೇ ನಾಶವಾದ ಕಥೆಯನ್ನು ಯಾರು ಕೇಳಿಲ್ಲ? "ಆಚಾರವಿಲ್ಲದ ನಾಲಿಗೆ ನಿನ್ನ ನೀಚ ಬುದ್ಧಿಯ ಬಿಡು ನಾಲಿಗೆ" ಎಂದು ದಾಸರು ನಾಲಿಗೆಯನ್ನು ತೆಗಳುತ್ತಾರೆ." ನಾವು ಆಡುವ ಮಾತು ಹೇಗಿರಲಿ ಗೆಳೆಯಾ ಎಂದು ಚೆನ್ನವೀರ ಕಣವಿಯವರು ಹೇಳುತ್ತಾರೆ. ಹಸಿರು ಹುಲ್ಲು ಮಕಮಲ್ಲಿನಲ್ಲಿ ಪಾರಿಜಾತ ಹೂವು ಸುರಿಸಿದಂತೆ ಮೃದುವಚನ ಮೂಲೋಕ ಗೆಲ್ಲುವುದಂತೆ. ಪ್ರಾಜ್ಞರು ಆಡುವ ವಿವೇಕ ಪೂರ್ಣವಾದ ಸತ್ವಯುತವಾದ ಒಂದೊಂದೆ ಮಾತಿನಲ್ಲೂ ಸಕಲ ಸಂಪತ್ತು ಅಡಗಿರುತ್ತದೆ.

ಇತರರ ಮನಸ್ಸಿಗೆ ಮುದ ನೀಡುವಂತೆ ಮೆದುವಾಗಿ ಮಾತನಾಡಬೇಕು. ಒಳ್ಳೆಯ ಮಾತಿಗೆ ಬಡತನವೇಕೆ? ನಮ್ಮ ಮಾತು ಇತರರಿಗೆ ಉಲ್ಲಾಸ, ಸಂತೋಷ, ಸಂಭ್ರಮ ನೀಡುವುದಾದರೆ ಅದೇ ಭಗವಂತನ ಸೇವೆ. "ಸಂತೋಷಂ ಜನಯೇತ್ ಪ್ರಾಜ್ಞಾ; ತದೇವೇಶ್ವರ ಪೂಜಿನಃ." ಸವಿಯಾದ, ಹಿತವಾದ, ಸಂತೋಷ ಜನಕವಾದ ಮಾತನ್ನಾಡುವುದೇ ಭಗವಂತನ ನಿಜವಾದ ಆರಾಧನೆ.

ಎಸ್.ಶ್ರೀನಿವಾಸಯ್ಯ
ಕಿತ್ತಿಗಾನಹಳ್ಳಿ



# ಒಲವು

ಈ ಸೃಷ್ಟಿಯಲ್ಲಿ ಅನೇಕ ಮಹಿಮೆಗಳು ತೋರುವುದು. ಪ್ರಕೃತಿ ಸೌಂದರ್ಯದ ಪರ್ವತ ಶ್ರೇಣಿ, ಸಮುದ್ರ, ಪ್ರಾಣಿ ವೈವಿಧ್ಯತೆ ಮತ್ತು ಇನ್ನೂ ಹಲವಾರು. ಪೂಜ್ಯ ಡಿ.ವಿ.ಜಿ.ಯವರು ಹೇಳಿದ ಕವನ "ಮೇಲೆ ನೋಡೆ ಕಣ್ಣ ತಣಿಪ ನೀಲ ಪಟದಿ ವಿವಿಧ ರೂಪ ಜಾಲಗಳನ್ನು ಬಣ್ಣಿಸಿರ್ಪ ಚಿತ್ರ ಚತುರನಾರ್? ಕಾಲದಿಂದ ಮಾಸದ ವಿಚಿತ್ರ ವೆಸಪನಾರ್?" – ಅದ್ಭುತ ವರ್ಣನೆ. ಹಾಗೆ ಮನುಜ ನಿರ್ಮಾಣದ ಬೇಲೂರು ಗುಡಿ, ತಾಜ್‌ಮಹಲ್, ಗೊಮ್ಮಟೇಶ್ವರ ಮುಂತಾದವುಗಳು, ತೀರ್ಥಯಾತ್ರೆ, ಕ್ಷೇತ್ರದರ್ಶನ, ಇತ್ಯಾದಿಗಳು ಮತ್ತು ಶಕ್ತಿಯನ್ನು ಉಪಯೋಗಿಸಿ ಮಾಡಿರುವ ಯಂತ್ರಗಳು ಜೀವನದ ಕಷ್ಟವನ್ನು ಕಡಿಮೆ ಮಾಡುತ್ತದೆ ಹಾಗೂ ದಿನನಿತ್ಯ ಏಕತಾನತೆಯಿಂದ ಬಿಡುಗಡೆ ಮಾಡುತ್ತದೆ. ತಿಮ್ಮ ಗುರು ಇದಕ್ಕಿಂತ ಹೆಚ್ಚಾದ ಒಂದನ್ನು ತಿಳಿಸುತ್ತಾರೆ. ಇದು ಸಂಸಾರಿಕ ಧರ್ಮದ ಆಕರ್ಷಣೆ. ಒಲವು–ಪ್ರೀತಿ ಇದು ಧರ್ಮಕ್ಕೆ ಒಳಪಟ್ಟಿದ್ದಾಗಿರಬೇಕು. ಇಂದ್ರಿಯ ವ್ಯಾಪಾರದಿ ಮುಗಿಯಬಾರದು. ಇದು ಜೀವನ ಸಂಸ್ಕಾರವಾಗಬೇಕು. ಇದು ಶಾಸ್ತ್ರ ಸಂಪ್ರದಾಯದಂತೆ ವಿಧಿ–ನಿಷೇದಕ್ಕೆ ಒಳಪಟ್ಟಿರಬೇಕು. ಧರ್ಮಕ್ಕೆ ಒಳಗಾಗಿರಬೇಕು.

ಚೆಲುವುನಗುವುಗಳ ಕಂಡವನ ಕಣ್ಣರಳುವುದು
ಅಳುವುನೋವುಗಳ ಕಂಡೊದ್ದೆಯಾಗುವುದು
ಇಳೆಯ ದನಿಗವನೆದೆಯೊಳೊಪ್ಪು ಮರುದನಿಯಹುದು
ಶಿಲೆಯಲ್ಲ ಯೋಗಿಯೆದೆ – ಮಂಕುತಿಮ್ಮ

ಬ್ರಹ್ಮಾನುಭವ ಪಡೆದ ಯೋಗಿ ಎದೆ ಕಠಿಣವಲ್ಲ. ಇಂದ್ರಿಯ ಕೆಲಸಗಳಿಗೆ ಹಾಗೂ ಲೋಕದ ಅನುಭವಗಳಿಗೆ ಅವನ ಹೃದಯ ಸ್ಪಂದಿಸುತ್ತದೆ. ಚೆಲುವು ಕಂಡಾಗ ಸಂತಸವಾಗುತ್ತದೆ. ನೋವು ಕಂಡಾಗ ಅವನು ದುಃಖದಿಂದ ಮಿಡಿಯುತ್ತಾನೆ. ಅಹಂತೆ ಬಿಟ್ಟು ಲೋಕ ನೋಡುತ್ತಾನೆ. ಆದರೆ ಲೋಕದ ಅಂಟು ಇರದು. ಅವನು ಚಿತ್ತ ಶುದ್ಧಿಯಿಂದ ವೀಕ್ಷಣೆ ಮಾಡುತ್ತಾನೆ. ಒಲವು ಜೀವ ಸೌಖ್ಯಕ್ಕೆ ಸೀಮಿತವಾಗದೆ ಸಂಸ್ಕಾರಕ್ಕೂ ಅವಶ್ಯಕ. ಲೋಕ ಧರ್ಮದ ವಿಧಿ–ನಿಷೇಧಕ್ಕೆ ಒಳಪಡಬೇಕು. ಜೀವಕ್ಕೆ ಕ್ಷೇಮ, ಶುಭ ಆಗುವುದಕ್ಕೆ ಸುಂದರ ಬದುಕು, ಆಸಕ್ತಿ, ಉತ್ಸಾಹ ಮನಕ್ಕೆ ಇರಬೇಕು. ಮನಕ್ಕೆ ಜ್ವರ ಬರಬಾರದು. ದೇಹ ಜ್ವರ ಬಿಟ್ಟ ನಂತರ ಎಂತಹ ಅನುಭವ. ಹಾಗೆ ಕಷ್ಟದ ನಡುವೆ ಸಂತೋಷ ಬರುತ್ತದೆ. ಮನ ದುಗುಡ, ದುಮ್ಮಾನ ಇರದೆ ಇರುವುದು ಒಂದು ಗುಣ, ತಟಸ್ಥ ಸ್ಥಿತಿ ಮತ್ತೊಂದು. ಈ ಜೀವನ ಮಂಗಳ. ಬಾಹ್ಯ ಬೋಧೆಯಿಂದ ತಿಳಿಸಲು ಅಸದಳವಾದುದನ್ನು ಒಳಹದದಿಂದ ತಿಳಿಯಬೇಕು.

ಸ್ಮಿತವಿರಲಿ ವದನದಲಿ, ಕಿವಿಗೆ ಕೇಳಿಸದಿರಲಿ
ಹಿತವಿರಲಿ ವಚನದಲಿ, ಋತವ ಬಿಡದಿರಲಿ
ಮಿತವಿರಲಿ ಮನಸಿನುದ್ವೇಗದಲಿ, ಭೋಗದಲಿ
ಅತಿ ಬೇಡವೆಲ್ಲಿಯುಂ – ಮಂಕುತಿಮ್ಮ

ಭ್ರಮರಾ ಗೋಪಿನಾಥ್



## ಮಕ್ಕಳಿಗಾಗಿ ಲೆಕ್ಕಗಳು

1. ರಾಜು ಮತ್ತು ಸೀತ ಅನ್ಯೋನ್ಯ ದಂಪತಿಗಳು. ರಾಜುವಿನ ವಯಸ್ಸು ತನ್ನ ಪತ್ನಿಯ ವಯಸ್ಸಿಗಿಂತ ಶೇ. ಹತ್ತರಷ್ಟು ಹೆಚ್ಚು. ರಾಜುವಿನ ಅರ್ಧ ವಯಸ್ಸು ಮತ್ತು ಸೀತಾರ ಪೂರ್ಣ ವಯಸ್ಸನ್ನು ಕೂಡಿದರೆ 93 ಬರುತ್ತದೆ. ರಾಜುವಿನ ಪೂರ್ಣ ವಯಸ್ಸು ಮತ್ತು ಸೀತಾರ ಅರ್ಧ ವಯಸ್ಸನ್ನು ಕೂಡಿದರೆ 96 ಬರುತ್ತದೆ. ಹಾಗಿದ್ದರೆ ರಾಜು ಮತ್ತು ಸೀತಾರ ವಯಸ್ಸು ಎಷ್ಟು ?
2. ಒಂದು ತೊಟ್ಟಿಗೆ ಎರಡು ನಲ್ಲಿಗಳಿವೆ. ಮೊದಲನೆಯ ನಲ್ಲಿಗೆ ತೊಟ್ಟಿಯನ್ನು ತುಂಬಲು 4 ಗಂಟೆಗಳು ಬೇಕಾದರೆ ಎರಡನೆಯ ನಲ್ಲಿಗೆ 6 ಗಂಟೆಗಳು ಬೇಕು. ಎರಡೂ ನಲ್ಲಿಗಳನ್ನು ಒಟ್ಟಿಗೇ ತೆರೆದರೆ ತೊಟ್ಟಿಯು ಎಷ್ಟು ಗಂಟೆಗಳಲ್ಲಿ ತುಂಬುತ್ತದೆ ?
3. ಪ್ರದ್ಯುಮ್ನ ಜಾಣ ಹುಡುಗ. ಅವು ತನ್ನ ಪರೀಕ್ಷೆಯಲ್ಲಿ ಆರು ವಿಷಯಗಳಿಂದ ಸರಾಸರಿ 95 ಗಳಿಸಿದ್ದಾನೆ. ಅವನು ನಾಲ್ಕು ವಿಷಯಗಳಲ್ಲಿ 98, 94, 93 ಮತ್ತು 94 ಗಳಿಸಿದ್ದಾನೆ. ಉಳಿದ ಎರಡು ವಿಷಯಗಳಾದ ಕನ್ನಡ ಮತ್ತು ಗಣಿತದಲ್ಲಿ ಅವನು ಕನ್ನಡಕ್ಕಿಂತ ಗಣಿತದಲ್ಲಿ ಒಂದು ಅಂಕ ಹೆಚ್ಚು ಗಳಿಸಿದ್ದರೆ, ಅವನು ಕನ್ನಡ ಮತ್ತು ಗಣಿತದಲ್ಲಿ ಎಷ್ಟು ಗಳಿಸಿದ್ದಾನೆಂದು ಕಂಡುಹಿಡಿಯಿರಿ.
4. ಶ್ರೀಕಾಂತನ ಬಳಿ ಆಯತಾಕಾರದ ಒಂದು ತೋಟವಿದೆ. ಅದರ ಉದ್ದ 200 ಅಡಿ ಇದ್ದರೆ ಅಗಲ 100 ಅಡಿ ಇದೆ. ಆ ತೋಟಕ್ಕೆ 100 ಅಡಿ ಅಗಲದ ಕಡೆಯಲ್ಲಿ ಗೋಡೆಯನ್ನು ಕಟ್ಟಲಾಗಿದೆ. ಉಳಿದ ಮೂರು ಕಡೆ ತಂತಿ ಬೇಲಿ ಹಾಕಲು ನಿರ್ಧರಿಸಲಾಗಿದೆ ಮತ್ತು ಮೂರು ಕಡೆಯಲ್ಲೂ ಪ್ರತಿ 20 ಅಡಿಗೆ ಒಂದರಂತೆ ಕಂಬವನ್ನು ನೆಡಬೇಕಾಗಿದೆ. ಹಾಗಿದ್ದರೆ ಅಲ್ಲಿ ನೆಡಬೇಕಾದ ಒಟ್ಟು ಕಂಬಗಳ ಸಂಖ್ಯೆ ಎಷ್ಟು ?
5. ಯಾವುದೋ ಮೂರು ಸಂಖ್ಯೆಗಳನ್ನು ಕೂಡಿದಾಗ ಬರುವ ಮೊತ್ತ ಮತ್ತು ಅದನ್ನು ಗುಣಿಸಿದಾಗ ಬರುವ ಮೊತ್ತ ಒಂದೇ ಆಗಿದ್ದರೆ, ಆ ಮೂರು ಸಂಖ್ಯೆಗಳು ಯಾವುವು ?

**ನಿಮ್ಮ ಉತ್ತರಗಳು**

5 ಸರಿ ಇದ್ದರೆ – ಅತ್ಯುತ್ತಮ, 3–4 ಸರಿ ಇದ್ದರೆ – ಉತ್ತಮ
1–2 ಸರಿ ಇದ್ದರೆ – ಹೆಚ್ಚಿನ ಅಭ್ಯಾಸ ಅಗತ್ಯ.

**ಸರಿ ಉತ್ತರಗಳು**

1) ರಾಜು ಮತ್ತು ಸೀತಾರ ವಯಸ್ಸು ಕ್ರಮವಾಗಿ 66 ಮತ್ತು 60
2) 2 ಗಂಟೆ 24 ನಿಮಿಷ
3) ಕನ್ನಡ ಮತ್ತು ಗಣಿತದಲ್ಲಿ ಕ್ರಮವಾಗಿ 95 ಮತ್ತು 96
4) 26 ಕಂಬಗಳು
5) 1, 2 ಮತ್ತು 3




ಬಿ.ಈ. ಗೋವಿಂದ್
9167762988


**ಸಂಘದ ಹೊಸ ಸದಸ್ಯರು**

ಶ್ರೀ ಇ. ರವಿಶಂಕರ್, ಶ್ರೀ ಕೆ. ರಾಮಮೂರ್ತಿ ಹಾಗೂ ಶ್ರೀಮತಿ ಚಂದ್ರಿಕಾ ಸುನಿಲ್

**ಸಂಘದ ಪೋಷಕರಾದ ಶ್ರೀಮತಿ ಜೆ.ಆರ್. ಲಲಿತಾರವರು 10,000 ರೂಪಾಯಿಗಳನ್ನು ವಿದ್ಯಾನಿಧಿಗಾಗಿ ನೀಡಿರುತ್ತಾರೆ.**

## 3ಡಿ ಚಿತ್ರಗಳು







ಸೋನಿಯಾ ಶಿವರಾಂ
9845024620

## ಮಾಡಿದ್ದುಣ್ಣೋ ಮಹಾರಾಯ

ಸಣ್ಣ ಕಥೆ

ಒಂದು ಊರಿನಲ್ಲಿ ಒಬ್ಬ ಬೆಣ್ಣೆ ಮಾರುವ ವ್ಯಾಪಾರಿ ಇದ್ದನು. ಅವನು ಪ್ರತಿದಿನ ಒಂದ ಕೆಜಿ ಬೆಣ್ಣೆಯನ್ನು ದಿನಸಿ ಅಂಗಡಿಗೆ ಮಾರುತ್ತಿದ್ದನು. ಅದರ ಬದಲಿಗೆ ಅವನು ದಿನಸಿ ಸಾಮಾಗ್ರಿಗಳನ್ನು ತೆಗೆದುಕೊಳ್ಳುತ್ತಿದ್ದನು. ಒಂದು ದಿನ ದಿನಸಿ ಅಂಗಡಿ ಮಾಲೀಕನು ಬೆಣ್ಣೆಯ ಪ್ರಮಾಣವನ್ನು ಅನುಮಾನಿಸಿದನು. ಮಾಲೀಕನು ಬೆಣ್ಣೆಯನ್ನು ತೂಕ ಮಾಡಿದಾಗ ಅದು ಬರೀ 900 ಗ್ರಾಂ ತೂಗಿತು. ಮರುದಿನ ಬೆಣ್ಣೆ ವ್ಯಾಪರಿ ಪ್ರತಿನಿತ್ಯದಂತೆ ಬೆಣ್ಣೆ ಮಾರಲು ಬಂದಾಗ ಕೋಪಗೊಂಡ ಅಂಗಡಿ ಮಾಲೀಕನು ಕಡಿಮೆ ತೂಕದ ಬಗ್ಗೆ ವಿಚಾರಿಸಿದನು. ಅದಕ್ಕೆ ಬೆಣ್ಣೆ ವ್ಯಾಪಾರಿಯು 'ಸ್ವಾಮಿ, ನಾನು ಸಣ್ಣ ವ್ಯಾಪಾರಿ. ನನ್ನ ಹತ್ತಿರ ತಕ್ಕಡಿಯಿಲ್ಲ. ನೀವು ಕೊಡುವ ದಿನಸಿ ಸಾಮಗ್ರಿಗಳನ್ನು ನಾನು ತೂಕ ಇಟ್ಟುಕೊಂಡು ಬೆಣ್ಣೆಯನ್ನು ತೂಗಿಸುವೆ' ಎಂದನು. ಅದರಿಂದ ಅಂಗಡಿ ಮಾಲೀಕನಿಗೆ ಅವಮಾನವಾಗಿ ತಲೆ ತಗ್ಗಿಸಿದನು ಹಾಗೂ ತನ್ನ ತಪ್ಪಿನ ಅರಿವಾಯಿತು.



ರಮ್ಯಾ ಅಶ್ವಥ್
98802 14848

# ಮೆಚ್ಚುಗೆ ನುಡಿಗಳು....

ಐವತ್ತು ವಸಂತಗಳ ದಾಂಪತ್ಯ ಪೂರೈಸಿದ ಹಿರಿಯ ದಂಪತಿಗಳಿಗೆ ಸಂಘವು ಗೌರವ ಸಮರ್ಪಣಾ ಕಾರ್ಯಕ್ರಮ, ಸಾಮೂಹಿಕ ಸತ್ಯನಾರಾಯಣ ಪೂಜೆಯೊಂದಿಗೆ ನಡೆದ ಸಮಾರಂಭದ ವಿಡಿಯೋ ಚಿತ್ರಣವನ್ನು ಖ್ಯಾತ ಛಾಯಾಗ್ರಾಹಕ ಶ್ರೀ ಎನ್.ಶಿವಕುಮಾರ್ ಚಿತ್ರಿಸಿದ್ದು ಅದನ್ನು ಸಾಮಾಜಿಕ ಜಾಲತಾಣ ಫೇಸ್‌ಬುಕ್, ವಾಟ್ಸಪ್‌ನಲ್ಲಿ ನೋಡಿ ಮೆಚ್ಚುಗೆ ಸೂಚಿಸಿದವರು:

ಎಸ್.ಸೋಮಸುಂದರ, ಸುಬ್ಬರಾವ್, ಜಿ.ಎನ್.ಶೀಲಾ, ವಿ.ಸುನಿಲ್, ಟಿ.ಎಸ್.ಮಣಿ, ಲೀಲಾ ಗುಂಡಪ್ಪ, ರಾಧಾ ವೆಂಕಟೇಶ್, ಆರ್.ರಮೇಶ್, ವಸಂತಾ ಛಾಯಾಪತಿ, ಸುರೇಶ್ ಭೀಮೇಶ್ವರ್, ಹೆಚ್.ಡಿ.ಗಣೇಶ್, ಶುಭಾ ಗಾಯತ್ರಿ, ಮಂಜು ನಾರಾಯಣ್, ಕರ್ನಲ್ ವಿ.ಜಿ.ರಾಜನ್, ಟಿ.ಎಲ್.ಚಂಪಕಧಾಮ, ಕಾವೇರಿ ಕುಮಾರ್, ಅನಂತ ಹೊಸಹಳ್ಳಿ, ಅಶ್ವಿನಿ ವೆಂಕಟೇಶ್, ಶಿಲ್ಪಾ ಶ್ರೀನಿವಾಸ್, ಕೆ.ಸಿ.ನಟರಾಜನ್, ಸಂಧ್ಯಾ ಗಡಿಯಾರ್, ಚುಮಿ ತುಳಸಿ, ಗಾಯತ್ರಿ ಗುರುರಾವ್, ಭರತ್ ಕೃಷ್ಣ, ಭಾಗ್ಯಲಕ್ಷ್ಮಿ, ಬಿ.ಪಿ.ಸರಸ್ವತಿ, ಅನಂತ ಸೇತುರಾಮ್, ನಾಗಪದ್ಮ, ತಟ್ನಹಳ್ಳಿ ಸುಬ್ರಮಣಿ, ಶ್ರೀನಿವಾಸ್ ಸೋಮೇಶ್ವರ್, ಚಂದ್ರಶೇಖರ್, ಗೋಪಿನಾಥ್ ನಾರಾಯಣ್, ಪ್ರತಿಭಾ ಜಯರಾಮ್, ಗೋಪಾಲಕೃಷ್ಣ ರಂಗನಾಥ್, ಅಟ್ಟೂರು ರಾಮಕೃಷ್ಣ ಶರ್ಮ.

* * *

ಸಂಘ ತಾ॥ 19.11.2017ರಂದು ಮುಳುಬಾಗಿಲು ಮತ್ತು ಇತರ ಕ್ಷೇತ್ರಗಳಿಗೆ ಏರ್ಪಡಿಸಿದ್ದ ಪ್ರವಾಸದ ಬಗ್ಗೆ ಮೆಚ್ಚುಗೆ ಸೂಚಿಸಿದವರು:

ಶ್ರೀಧರ ಮೂರ್ತಿ, ಡಾ॥ ಜಿ.ಸ್ವಾಮಿನಾಥ್, ಪದ್ಮಶ್ರೀ, ಎಸ್.ಆರ್.ವಿಜಯ್‌ಕುಮಾರ್, ಬಿ.ಎನ್.ಜಿ.ಪ್ರಸಾದ್, ಬಿ.ಎನ್.ಜಿ.ಕುಮಾರ್, ನಾಗಪದ್ಮ, ವಿಜಯ, ಸುಧಾ, ವಿ.ಸುನಿಲ್, ವಿಜಯಕುಮಾರ್, ಎಸ್.ರಮೇಶ್ ಬಾಬು, ಆರ್.ಪಿ.ಮೋಹನ್, ಅಶೋಕ್ ಕುಮಾರ್, ಎಸ್.ಆರ್.ಬಾಲ ಸುಬ್ರಹ್ಮಣ್ಯಮ್, ರಾಧಾ ವೆಂಕಟೇಶ್, ಆರ್.ರಮೇಶ್, ಕೆ.ಗುಂಡಪ್ಪ, ಗಣೇಶ್ ಶ್ರೀಧರ್, ಸೋನಿಯಾ, ಶಿಲ್ಪಾ ಶ್ರೀನಿವಾಸ್, ತಾರಾ ಶ್ರೀನಿವಾಸ್, ವೆಂಕಟೇಶ್, ರಾಮ ಸ್ವರೂಪ್, ಟಿ.ಎಲ್.ಚಂಪಕಧಾಮ, ಸುಪ್ರೀತಾ, ಟಿ.ಎಸ್.ಮಣಿ, ಟಿ.ಪಿ.ಜಗನ್ನಾಥ, ವನಿತಾ, ಜಿ.ಎನ್.ಶೀಲಾ.

## ಸುದ್ದಿ ಮನೆ



ಕರ್ನಾಟಕ ಅಂಚೆ ಮತ್ತು ತಂತಿ ನೌಕರರ ಗೃಹ ನಿರ್ಮಾಣ ಸಂಘದವರು ದಿನಾಂಕ ೧೭.೧೨.೨೦೧೭ರಂದು ಕರ್ನಾಟಕ ರಾಜ್ಯೋತ್ಸವ ಆಚರಣೆಯ ಸಂದರ್ಭದಲ್ಲಿ ಸಂಘದ ಹಿರಿಯ ಸದಸ್ಯ ಶ್ರೀ ಚಂದ್ರಮೌಳಿಯವರನ್ನು ಸನ್ಮಾನಿಸಿದರು.



ಸಂಘದ ಹಿರಿಯ ಸದಸ್ಯರಾದ ಶ್ರೀ ಸತ್ಯಮೂರ್ತಿಯವರು ಕನ್ನಡೇತರರಿಗೆ ಕನ್ನಡ ಕಲಿಸುತ್ತಿರುವುದಕ್ಕಾಗಿ ಮತ್ತು ಕನ್ನಡಕ್ಕೆ ಸಲ್ಲಿಸುತ್ತಿರುವ ಸೇವೆಗಾಗಿ ಕೇಂದ್ರೀಯ ಸದನವು ತಾ॥ ೨೯.೧೧.೨೦೧೭ರಂದು ಸಾರ್ವಜನಿಕವಾಗಿ ಶ್ರೀಯುತರನ್ನು ಗೌರವಿಸಿರುವುದು ನಮಗೆಲ್ಲಾ ಹೆಮ್ಮೆಯ ವಿಷಯ.



ಬೃಹಚ್ಚರಣ ಸಂಘದ ೨೦೧೮ರ ಕ್ಯಾಲೆಂಡರ್ ಬಿಡುಗಡೆ ಸಂದರ್ಭ



ಚಿತ್ರ : ಅಶ್ವಿನಿ ವೆಂಕಟೇಶ್

# ಸೋಮೇಶ್ವರ - ಕ್ಷಮಾಂಬಿಕ ಸನ್ನಿಧಿ

ನಮ್ಮ ಬೃಹಚ್ಚರಣ ಸಂಘ 19.11.2017ರಂದು ಏರ್ಪಡಿಸಿದ್ದ ಒಂದು ದಿನದ ಮುಳುಬಾಗಿಲು ಪ್ರವಾಸ ಮರೆಯಲಾಗದಂಥದ್ದು. ಪ್ರವಾಸದ ಅನುಭವ ಅದ್ಭುತವಾಗಿತ್ತು.

ಪ್ರವಾಸದಂದು ಕುರುಡುಮಲೆಯ ಗಣೇಶ ಮೂರ್ತಿಯನ್ನು ನೋಡಿ ಅತ್ಯಾಶ್ಚರ್ಯವಾಯಿತು. ಈ ವಿಗ್ರಹ ಸಾಲಿಗ್ರಾಮ ಶಿಲೆಯಿಂದ ಕೂಡಿದೆ. ಈ ಮೂರ್ತಿ ನಮ್ಮ ಬಸವನಗುಡಿಯ ದೊಡ್ಡ ಗಣೇಶನ ಮೂರ್ತಿಯಂತೆ ಇದೆ. ಈ ಮೂರ್ತಿಗೆ ದೇವಸ್ಥಾನವನ್ನು ವಿಜಯನಗರದ ದೊರೆ ಕೃಷ್ಣದೇವರಾಯ ಕಟ್ಟಿಸಿದನಂತೆ.

ಇಲ್ಲಿಂದ ಸ್ವಲ್ಪ ದೂರದಲ್ಲೇ ಆಪ್ಯಾಯಮಾನವಾದ ಪ್ರಾಚೀನ ಸೋಮೇಶ್ವರ ದೇವಾಲಯವಿದೆ. ಈ ದೇವಾಲಯದ ವಿಶೇಷ ವೇನೆಂದರೆ ಇದಕ್ಕೆ ಪಾಯ ಹಾಕದೆ ಬಂಡೆಯ ಮೇಲೆ ಕಟ್ಟಲಾಗಿದೆ ಯಂತೆ. ಇದು ಗಣೇಶನ ಮಂದಿರಕ್ಕಿಂತ ಪುರಾತನವಾದದ್ದು. ಅರ್ಧ ದೇವಸ್ಥಾನವನ್ನು ಕರ್ನಾಟಕದ ಪ್ರಖ್ಯಾತಿ ಶಿಲ್ಪಿ ಜಕಣಾಚಾರಿ, ಇನ್ನರ್ಧ ದೇವಸ್ಥಾನವನ್ನು ಅವನ ಪುತ್ರ ಡಂಕಣಾಚಾರಿ ಕೆತ್ತಿದ್ದಾರಂತೆ. ದೇವಸ್ಥಾನದ ಎದುರು ಸುಂದರ ಮತ್ತು ಬೃಹದಾದ ನಂದಿ ಮೂರ್ತಿ ಮನಸೆಳೆಯುವಂತಿದೆ. ಅದೇ ಆವರಣದಲ್ಲಿ ನಾವು ಮಾಡಿರುವ ಅಪರಾಧಗಳನ್ನು ಕ್ಷಮಿಸುತ್ತಾಳೆ ಎಂಬ ಪ್ರತೀತಿ ಇರುವ ಕ್ಷಮಾಂಬಿಕೆಯೂ ಇದ್ದಾಳೆ. ಪ್ರವಾಸದ ಸಮಯದಲ್ಲಿ ಈ ದೇವಸ್ಥಾನವನ್ನು ನೋಡಲು ಅವಕಾಶವಾಗಿದ್ದಕ್ಕೆ ಸಂಘದವರಿಗೆ ನನ್ನ ಧನ್ಯವಾದಗಳು.



**ರಾಧಾ ವೆಂಕಟೇಶ್**
**9620197410**

# ಒಂದು ದಿನದ ಪ್ರವಾಸ

ನಮ್ಮ ಸಂಘದಿಂದ ಒಂದು ದಿನದ ಪ್ರವಾಸವು ದಿನಾಂಕ 19.11.2017 ಭಾನುವಾರ ಬೆಳಗ್ಗೆ ಸುಮಾರು 6.30ಕ್ಕೆ ಶ್ರೀ ದ್ವಾರಕನಾಥ್ ಭವನದಿಂದ ಹೊರಟಿತು. ಮೊದಲಿಗೆ ಕೋಲಾರದ ಕಡೆ ಹೋಗುವಾಗ ಕಾಮತ್ ಉಪಚಾರ್‌ನಲ್ಲಿ ಬೆಳಿಗ್ಗೆ ಕಾಫಿ ಸೇವಿಸಿ, ನಂತರ ಮುಳಬಾಗಿಲು ಶ್ರೀ ಆಂಜನೇಯಸ್ವಾಮಿ ದೇವಸ್ಥಾನಕ್ಕೆ ಹೋದೆವು. ಅದರ ಎದುರುಗಡೆ ಇರುವ ಛತ್ರದಲ್ಲಿ ಬಿಸಿ ಬಿಸಿಯಾಗಿ ಪೊಂಗಲ್, ಇಡ್ಲಿ, ವಡೆ, ಹಲ್ವ ಎಲ್ಲಾ ಪ್ರಯಾಣಿಕರಿಗೂ ಸಂಘದವರೇ ಹಂಚಿದರು. ಸವಿದ ತಿಂಡಿ ಬಹಳ ರುಚಿಯಾಗಿದ್ದು ಎಲ್ಲರೂ ಹೊಗಳಿದರು. ಮುಂದೆ ಕುರುಡುಮಲೆ ಶ್ರೀ ಗಣಪತಿ ದೇವರ ದರ್ಶನಕ್ಕೆ. ಏಕಶಿಲಾ ಸಾಲಿಗ್ರಾಮ ಗಣಪತಿ, ಮುಂದೆ ಕೋಲಾದೇವಿ ಎಂಬ ಸ್ಥಳದಲ್ಲಿ ಶ್ರೀ ಗರುಡನ ದೇವಸ್ಥಾನ. ಇದರಲ್ಲಿ ಶ್ರೀ ಗರುಡನ ಹಸ್ತವೊಂದರಲ್ಲಿ ಶ್ರೀ ಲಕ್ಷ್ಮಿ ಮತ್ತು ಇನ್ನೊಂದು ಹಸ್ತದಲ್ಲಿ ಶ್ರೀ ವಿಷ್ಣು ಇದೆ. ವಿಶೇಷವಾದ ಈ ದೇವಾಲಯವನ್ನು ಎಲ್ಲೂ ಸಹ ನೋಡಿರಲಿಲ್ಲ. ನಂತರ ಶ್ರೀ ಆವಣಿ ಮಠಕ್ಕೆ ಹೋದೆವು. ನಾವು ಅಲ್ಲಿಗೆ ಹೋಗುವಷ್ಟರಲ್ಲಿ ನಮಗೆ ಭರ್ಜರಿಯಾದ ಊಟ ತಯಾರಾಗಿತ್ತು. 2 ರಿಂದ 3 ಗಂಟೆಗಳ ಕಾಲಾವಕಾಶವಿದ್ದು ವಿಶ್ರಮಿಸಿಕೊಂಡೆವು. ಊಟ ಮಾಡಿದ ನಂತರ ಚಿಕ್ಕ ಬೆಟ್ಟದ ಮೇಲೆ ಶ್ರೀ ಶಾರದ ಅಮ್ಮನವರ ಮುದ್ದಾದ ವಿಗ್ರಹದ ದರ್ಶನ ಮಾಡಿದೆವು. ಕೆಲವರು ದೇವಿಯ ಮೇಲೆ ಹಾಡು ಹೇಳಿದರು. ಸುಮಾರು 4.30ಕ್ಕೆ ವಿರೂಪಾಕ್ಷಿಯಲ್ಲಿರುವ ಶ್ರೀ ಸೋಮೇಶ್ವರ ವಿರೂಪಾಕ್ಷಿ ದೇವಸ್ಥಾನದ ಶ್ರೀ ಶಿವನ ಲಿಂಗ ದರ್ಶನ ಮಾಡಿದೆವು. ಅಲ್ಲೇ ಇರುವ ಪ್ರಾಂಗಣದಲ್ಲಿ ಒಂದು ಸ್ಥಳದಲ್ಲಿ ಕಣ್ಣು ಮುಚ್ಚಿಕೊಂಡು ನಾವು ಏನಾದರೂ ಮನಸ್ಸಿನಲ್ಲಿ ಅಂದುಕೊಂಡರೆ ಅದರಿಂದ ನಮಗೆ ಒಂದು ತರಹದ ವೈಬ್ರೇಷನ್ ಆಗುತ್ತದೆ. ಇದರಿಂದ ನಾವು ಮನಸ್ಸಿನಲ್ಲಿ ಅಂದುಕೊಂಡ ವಿಷಯವು ಆಶೀರ್ವಾದ ನಮಗೆ ತಲುಪುತ್ತದೆ ಎಂದು ಮನವರಿಕೆ ಯಾಯಿತು. ಇದಾದ ನಂತರ ಈಗಿನ ಜನರೇಷನ್ ಸ್ನ್ಯಾಕ್ಸ್ ಅಂದರೆ ಪಾನೀಪುರಿ, ಮಸಾಲಪುರಿ ಮುಂತಾದವನ್ನು ಎಲ್ಲರಿಗೂ ಹಂಚಿದರು. ರುಚಿಯಾಗಿ ಬಹಳ ಚೆನ್ನಾಗಿತ್ತು. ಅಲ್ಲೇ ನಮಗೆಲ್ಲರಿಗೂ ರಾತ್ರಿಯ ಫಲಹಾರದ ವ್ಯವಸ್ಥೆ ಡಬ್ಬಿಗಳಲ್ಲಿ ಉಪ್ಪಿಟ್ಟು ವಿತರಿಸಿದರು. ನಮ್ಮ ನಾಲ್ಕು ಬಸ್ಸುಗಳೂ ಬೆಂಗಳೂರನ್ನು ಸುಖವಾಗಿ ಸೇರಿದವು. ಪ್ರಯಾಣವು ಬಹಳ ಆಹ್ಲಾದಕರವಾಗಿದ್ದು, ನಮ್ಮ ಸಂಘದ ಅಧ್ಯಕ್ಷರು, ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರು ಬಹಳ ವ್ಯವಸ್ಥೆಯಿಂದ ಈ ಪ್ರಯಾಣಕ್ಕೆ ರೂವಾರಿಯಾಗಿದ್ದಾರೆ. ಅವರುಗಳಿಗೆಲ್ಲಾ ವಂದನೆಗಳು. ಪ್ರವಾಸ ಕೈಗೊಂಡ ಎಲ್ಲರಿಗೂ ಸಂಘದಿಂದ ಬಿಸ್ಕತ್, ನೀರಿನ ಬಾಟಲ್, ಕಿತ್ತಳೆ ಹಣ್ಣು, ಕೋಡುಬಳೆ, ಚಕ್ಕಲಿ, ಟವಲ್ ಮತ್ತು ಇತರೆ ಪದಾರ್ಥಗಳನ್ನು ವಿತರಿಸಲಾಯಿತು. ಎಲ್ಲರೂ ಬಹಳ ಸಂತೋಷದಿಂದ ಮನೆ ಸೇರಿದೆವು. ಈ ರೀತಿ ಪ್ರವಾಸ ಮತ್ತೊಮ್ಮೆ ಬೇಗ ಬರಲೆಂದು ಆಶಿಸುತ್ತೇನೆ.



**ಲೀಲಾವತಿ ಗುಂಡಪ್ಪ**
**98453 32315**

# ತ್ಯಾಗರಾಜ-ಪುರಂದರ ಸಾಮ್ಯ

**ಕ**ರ್ನಾಟಕ ಸಂಗೀತ ಪಿತಾಮಹ ಶ್ರೀ ಪುರಂದರದಾಸರು ಮತ್ತು ತ್ಯಾಗಬ್ರಹ್ಮ ಶ್ರೀ ತ್ಯಾಗರಾಜರು ಭಕ್ತಿ ಮಾರ್ಗದ ಪ್ರವರ್ತಕರು. ಇವರಿಬ್ಬರೂ ತಾವು ಕಂಡ ದರ್ಶನವನ್ನು ಸಂಗೀತದ ಮೂಲಕ ಸಾಹಿತ್ಯ ಬಳಸಿ ತಾಳಬದ್ಧವಾಗಿ ಹೇಳಿ ವಾಗ್ಗೇಯಕಾರರು ಎನಿಸಿದ್ದಾರೆ. ಪುರಂದರದಾಸರು 15ನೇ ಶತಮಾನದಲ್ಲಿ ವಿಜಯನಗರ ಸಾಮ್ರಾಜ್ಯದಲ್ಲಿ ಇದ್ದವರು. ತ್ಯಾಗರಾಜರು 18ನೇ ಶತಮಾನದಲ್ಲಿ ತಂಜಾವೂರು ಪ್ರಾಂತ್ಯದಲ್ಲಿದ್ದವರು. ಪುರಂದರದಾಸರು ಸಂಗೀತಾಭ್ಯಾಸಕ್ಕಾಗಿ ಸರಳೆವರಸೆಗಳು, ಜಂಟಿವರಸೆಗಳು, ದಾಟುಸ್ವರಗಳು, ಮಂದ್ರ–ತಾರಾಸ್ಥಾಯಿ ವರಸೆಗಳು, ಸ್ವರಜತಿಗಳು, ಪಿಳ್ಳಾರಿ ಗೀತೆಗಳು, ವರ್ಣಗಳು, ಕೀರ್ತನೆಗಳು ಹೀಗೆ ಹಂತಹಂತವಾಗಿ ಪ್ರಾಥಮಿಕ ಸಂಗೀತ ಶಿಕ್ಷಣಕ್ಕೆ ರೂಪುರೇಖೆಯನ್ನು ರಚಿಸಿಕೊಟ್ಟಿದ್ದಾರೆ. ಅದೇ ರೀತಿ ತ್ಯಾಗರಾಜರು ಕರ್ನಾಟಕ ಶಾಸ್ತ್ರೀಯ ಸಂಗೀತವನ್ನು ಎಂದೆಂದಿಗೂ ನೆಲೆ ನಿಲ್ಲುವಂತೆ ಮಾಡಿ, ಪ್ರಸಿದ್ಧ ಪಂಚರತ್ನ ಕೀರ್ತನೆಗಳಾದ ಜಗದಾನಂದ ಕಾರಕ (ನಾಟ), ದುಡುಕುಗಲ (ಗೌಳ), ಸಾದಿಂಚನೆ (ಆರಭಿ), ಕನಕನರುಚಿರ (ವರಾಳಿ), ಮತ್ತು ಎಂದರೋ ಮಾಹಾನು ಭಾವುಲು (ಶ್ರೀರಾಗ) ರಚನೆಗಳನ್ನು ರಚಿಸಿದ್ದಾರೆ. ಪುರಂದರದಾಸರು 'ಪುರಂದರ ವಿಠ್ಠಲ'ನೆಂಬ ಅಂಕಿತದೊಂದಿಗೆ ಸರಳಗನ್ನಡದಲ್ಲಿ ಅತೀ ಪಾಮರರಿಗೂ ತಿಳಿಯುವಂತೆ ದೇವರನಾಮಗಳನ್ನು ರಚಿಸಿದ್ದಾರೆ. ತ್ಯಾಗರಾಜರು 'ತ್ಯಾಗರಾಜ' ಎಂಬ ಅಂಕಿತದೊಂದಿಗೆ ತೆಲುಗಿನಲ್ಲಿ ಹೆಚ್ಚು ರಚನೆಗಳನ್ನು ಮಾಡಿದ್ದಾರೆ. ಸಂಗೀತ ಪ್ರಪಂಚಕ್ಕೆ ಇಲ್ಲಿಯವರೆಗೂ ಪುರಂದರದಾಸರ ಸಾವಿರಾರು ದೇವರ ನಾಮಗಳು ಮತ್ತು ತ್ಯಾಗರಾಜರ 700ಕ್ಕೂ ಹೆಚ್ಚು ಕೃತಿಗಳು ದೊರಕಿವೆ. ಪ್ರತೀ ಕಛೇರಿಯೂ ಪುರಂದರ, ತ್ಯಾಗರಾಜರ ಕೃತಿಗಳನ್ನು ಹೊಂದಿರುತ್ತದೆ. ಪುರಂದರ, ತ್ಯಾಗರಾಜರ ಆರಾಧ್ಯ ದೈವ ವಿಠ್ಠಲ ಮತ್ತು ಶ್ರೀರಾಮನಾದರೂ ಇತರ ದೇವಾನು ದೇವತೆಗಳನ್ನು ಉದ್ದೇಶಿಸಿ ಕೃತಿಗಳನ್ನು ರಚಿಸಿದ್ದಾರೆ. ಅರ್ಥಬದ್ಧ, ತಾಳಬದ್ಧ, ಭಕ್ತಿ ಪ್ರಧಾನ ರಚನೆಗಳು ಮನಸ್ಸಿಗೆ ಮುದ ತರುವಂಥದ್ದು. ಇವರಿಬ್ಬರೂ ಭಗವಂತನ ಸಾಕ್ಷಾತ್ಕಾರಕ್ಕಾಗಿ ಸಂಗೀತವನ್ನು ಮಾಧ್ಯಮವಾಗಿಸಿಕೊಂಡವರು. ತ್ಯಾಗರಾಜರು ಪುರಂದರದಾಸರ ಕೃತಿಗಳಿಂದ ಪ್ರಭಾವಿತರಾಗಿದ್ದರೆಂದು ನಾವು ಅವರ ರಚನೆ ಗಳಲ್ಲಿ ಕಾಣಬಹುದು. ಅವುಗಳಲ್ಲಿ ಕೆಲವನ್ನು ನಮ್ಮ ಗಮನಕ್ಕೆ ತಂದುಕೊಳ್ಳಲು ಪ್ರಯತ್ನಿಸೋಣ.

ಭಗವತ್ ಭಕ್ತರಾಗಿ ಪುರಂದರದಾಸರು, ತ್ಯಾಗರಾಜರು ತಮ್ಮ ಜೀವನದಲ್ಲಿ ಸಹಿಸಲಸಾಧ್ಯ ವಾದ ಕಷ್ಟಗಳು ಬಂದಾಗಲೂ ನಿರಂತರ ಸ್ಮರಣೆ, ಧ್ಯಾನ, ಜಪ ಮಾಡುತ್ತಿದ್ದುದರಿಂದ ಅವ್ಯಾವುದೂ ಅವರನ್ನು ಕಾಡಲಿಲ್ಲ. ಪೂರ್ವಜನ್ಮದ ಸುಕೃತ ಫಲವಾಗಿ ಇಬ್ಬರಿಗೂ ಮನೋನುಕೂಲವಾದ ಪತ್ನಿಯರು ದೊರಕಿದ್ದರು. ಇಬ್ಬರ ಜೀವನ ದಲ್ಲೂ ಪ್ರಥಮವಾಗಿ ಪತ್ನಿಯರಿಗೇ ದೈವ ದರ್ಶನವಾದರೂ, ಪುರಂದರದಾಸರು, ತ್ಯಾಗ ರಾಜರಿಗೆ ಭಗವಂತನ ಅಂತರ್‌ದರ್ಶನವಾಗಿತ್ತು.

ಪುರಂದರದಾಸರ ಆರಾಧನೆ ಪುಷ್ಯ ಬಹುಳ ಅಮಾವಾಸ್ಯೆಯಂದು ಮತ್ತು ತ್ಯಾಗರಾಜರ ಆರಾಧನೆ ಪುಷ್ಯ ಬಹುಳ ಪಂಚಮಿಯಂದು ಆಚರಿಸುತ್ತಾರೆ. ಈ ಸಮಯದಲ್ಲಿ ಶಾಸ್ತ್ರೀಯ ಸಂಗೀತ ಕಾರ್ಯಕ್ರಮಗಳನ್ನು ಶ್ರೀರಂಗಪಟ್ಟಣ ಮತ್ತು ತಂಜಾವೂರಿನ ತಿರುವಯ್ಯಾರಿನಲ್ಲಿ ವಿಜೃಂಭಣೆ, ಭಕ್ತಿ, ಶ್ರದ್ಧೆಗಳಿಂದ ಆಚರಿಸುವ ವಾಡಿಕೆ ಇದೆ. ಈ ಸುಸಂದರ್ಭದಲ್ಲಿ ಪ್ರತೀ ವರ್ಷ ಇವರಿಬ್ಬರ ಸ್ಮರಣೆ ಮಾಡುವುದಕ್ಕೆ ಶಾಸ್ತ್ರೀಯ ಸಂಗೀತಲೋಕದ ದಿಗ್ಗಜರು ಭಾಗವಹಿಸಿ ತಮ್ಮ ಗಾಯನದ ಮೂಲಕ ಸೇವೆ ಸಲ್ಲಿಸುತ್ತಾರೆ. ಈ ವರ್ಷ ಪುರಂದರ ಆರಾಧನೆಯು 16.1.2018 ರಂದು ಮತ್ತು ತ್ಯಾಗರಾಜರ ಆರಾಧನೆ 6.1.2018 ರಂದು. ಸಂಗೀತವನ್ನು ಬರೀ ಮನೋರಂಜನೆ ಗಾಗಿ ಕೇಳದೆ ಅದರಲ್ಲಡಗಿರುವ ವಾಚ್ಯಾರ್ಥ, ಲಕ್ಷ್ಯಾರ್ಥ, ಭಾವಾರ್ಥವನ್ನು ಗಮನಿಸಿ ಈ ಸತ್ಪುರುಷರು ತೋರಿದ ಮಾರ್ಗದಲ್ಲಿ ನಡೆದು ಅದರಂತೆ ನಾವೂ ಕೃತಾರ್ಥರಾಗೋಣ.

| ವಿಷಯ | ಪುರಂದರದಾಸರ ರಚನೆ | ತ್ಯಾಗರಾಜರ ಕೃತಿ |
|---|---|---|
| ಗಣೇಶ | ಗಜವದನ ಬೇಡುವೆ | ಗಿರಿರಾಜ ಸುತಾ ತನಯ |
| ಗುರುಗಳು | ಗುರುವಿನ ಗುಲಾಮನಾಗುವತನಕ | ಗುರುಲೇಕ ಇಟುವಂಟಿ |
| ಶರೀರ ಮಾಧ್ಯಮ | ಮನುಜ ಶರೀರ ಏನು ಸುಖ | ಭಕ್ತಿ ಬಿಚ್ಚಮೀಯ್ಯವೆ |
| ಮನಸ್ಸು | ಮನವ ನಿಲಿಸುವುದು ಬಲು ಕಷ್ಟ | ಮನಸುನಿಲ್ಪ ಶಕ್ತಿ |
| ಪಂಚೇಂದ್ರಿಯಗಳ ಸದ್ಬಳಕೆ | ನೋಡುವುದೇ ಕಣ್ಣು ಕೇಳುವುದೇ | ನಿನು ವಿನಾ ನಾಮದೆಂದು |
| ಗ್ರಹಬಲ | ಸಕಲಗ್ರಹಬಲ ನೀನೆ | ಗ್ರಹಬಲಮೇಮಿ |
| ಕರ್ಮಸಿದ್ಧಾಂತ | ಆರೇನ ಮಾಡುವರು ಅವನಿಯೊಳಗೆ | ರಾನಿದಿ ರಾದು ಸುರಾಸುರ |
| ಉಪಾಸನೆಯ ಪ್ರಾಮುಖ್ಯತೆ | ಧರ್ಮಶ್ರವಣವಿದೇತಕೆ ಮೂರ್ಖಗೆ | ಚೆವಿಟಿಕಿ ಉಪದೇಶಿಂಚಿ |
| ರೂಪದರ್ಶನ | ಕೃಷ್ಣಮೂರ್ತಿ ಕಣ್ಣ ಮುಂದೆ | ಸಾಮಜವರಗಮನ |
| ಪೂಜಾ ವಿಧಾನ | ಸುಲಭದ ಪೂಜೆಯ ಮಾಡಿ | ಉಪಚಾರಮುಲನು |
| ನಿಜ ಭಕ್ತಿ | ಕಲಿಯುಗದಲಿ ಹರಿನಾಮವ | ಪಾದವಿ ನಿ ಸದ್ಭಕ್ತಿ |
| ಹುಸಿ ಭಕ್ತಿ ಸಲ್ಲದು | ಸಾಮಾನ್ಯವಲ್ಲ ಶ್ರೀಹರಿ ಸೇವೆ | ಆಡಿಕಾಡು ಭಜನ |
| ಭಕ್ತಿಯ ಪರಾಕಾಷ್ಠತೆ | ನೀನ್ಯಾಕೋ ನಿನ್ನ ಹಂಗ್ಯಾಕೋ | ನಗುಮೋಮು ಗನಲೇನಿ |
| ಅಂತರಂಗವೇದನೆ | ಕರುಣಿಸೋ ರಂಗ ಕರುಣಿಸೋ | ಎಂತಾವೇಡುಕೊಂಡು |
| ರಾಮ ಸಾನ್ನಿಧ್ಯ | ಅಂತರಂಗದಲಿ ಹರಿಯ | ನಿಧಿಚಾಲ ಸುಖಮಾ |
| ನಿರತ ದೈವ ಚಿಂತನೆ | ಮೋಸಹೋದನೆಲ್ಲೋ ನಾನು | ಮೋಸಬೋಕು ವಿನವೇ |
| ತಿರುಪತಿ ವೆಂಕಟರಮಣ | ತಿರುಪತಿ ವೆಂಕಟರಮಣ | ತೆರೆತೀಯಗರಾದಾ |
| ನಾಮ ರುಚಿ | ರಾಮನಾಮ ಪಾಯಸಕ್ಕೆ | ರಾಮಕಥಾಸುಧಾರಸ |
| ಆರಾಧ್ಯ ದೈವ | ರಂಗನ ನೋಡಿರೆ | ರಾಮ ಕೋದಂಡ ರಾಮ |
| ದೈವ ಸ್ಮರಣೆ | ಹರಿಯ ನೆನೆಸಿದ ದಿವಸ | ಚೂತಮುರಾರೆ |
| ಭಗವತ್ ಕಾರುಣ್ಯ | ದಾಸನ ಮಾಡಿಕೋ ಎನ್ನ | ಮೇಲುಕೋ ದಯಾನಿಧೆ |
| ಧನ್ಯತಾಭಾವ | ನಿನ್ನ ನೋಡಿ ಧನ್ಯನಾದೆನೋ | ಭವನುತ ನಾ ಹೃದಯ |
| ಸ್ಮರಣೆ | ಸ್ಮರಣೆ ಒಂದೇ ಸಾಲದೆ | ಸ್ಮರಣೆ ಸುಖಮು |
| ಶರಣಾಗತಿ | ಹರಿ ನೀ ಒಲಿದರೆ | ರಾಮ ನಿನು ವಿನಾ |
| ಸತ್ ಚಿಂತನೆಯ ಫಲ | ಇದು ಭಾಗ್ಯ ಇದು ಭಾಗ್ಯ | ಇದೇ ಭಾಗ್ಯಮು |
| ದ್ವೈತಾದ್ವೈತ ಮಾರ್ಗ | ದ್ವೈತವು ಸುಖವಾ | ದ್ವೈತಮು ಸುಖಮಾ |
| ಜ್ಞಾನ ಮಹತ್ವ | ಜ್ಞಾನವೊಂದೇ ಸಾಕು ಮುಕ್ತಿಗೆ | ಯಜ್ಞಾದುಲು ಸುಖಮನು |
| ಅಪರಾಧ ಕ್ಷಮಾಪಣೆ | ತಪ್ಪುಗಳೆಲ್ಲಾ ಪರಿಹರಿಸು | ಅಪರಾಧಮುಲಮಾನ್ಪಿ |
| ಲಾಲಿ ಹಾಡು | ಜೋಜೋ ಶ್ರೀ ಕೃಷ್ಣ ಪರಮಾನಂದ | ರಾಮ ಶ್ರಿರಾಮ ಲಾಲಿ |
| ಮಂಗಳ | ಮಕುಟಕೆ ಮಂಗಳಂ | ಪವಮಾನ ಸುತಡು |



✍ ಆರ್. ರಮೇಶ್
9886034048

*With Best Compliments from*

**ಶ್ರೀ ಚರಣ್ ಸೌಹಾರ್ದ ಕೋ-ಆಪರೇಟಿವ್ ಬ್ಯಾಂಕ್ ಲಿ.**

**SREE CHARAN SOUHARDHA CO-OPERATIVE BANK LTD.**

**ಶ್ರೀ ಚರಣ್ ಭವನ್** **SREE CHARAN BHAVAN**

**HEAD OFFICE** : # 87/1, H.B. Samaja Road, Basavanagudi, Bengaluru - 560 004. Ph.: 26676837 Fax : 26606135.
e-mail : scscb.helpdesk@sreecharanbank.com, web : www.sreecharanbank.com

## ಕರ್ನಾಟಕ ಸಂಗೀತ ಪಿತಾಮಹ ಶ್ರೀ ಪುರಂದರದಾಸರು (ಕ್ರಿ.ಶ. 1484-1564)

ಕರ್ನಾಟಕ ಸಂಗೀತ ಪಿತಾಮಹರೆಂದೇ ಜಗತ್ತಿನಾದ್ಯಂತ ಪ್ರಖ್ಯಾತಿ ಪಡೆದಿರುವ ಪುರಂದರದಾಸರು, ಕರ್ನಾಟಕ ಸಂಗೀತಕ್ಕೆ ತಳಪಾಯ ಹಾಕಿದವರು. ಅಭ್ಯಾಸ ಗಾನವನ್ನು ಕ್ರಮಪಡಿಸಿದ ಕೀರ್ತಿ ಇವರದ್ದು. ಇಂದಿಗೂ ಸಂಗೀತ ವಿದ್ಯಾರ್ಥಿಗಳು ತಮ್ಮ ಬಾಲ್ಯದ ಪಾಠವನ್ನು ಪ್ರಾರಂಭಿಸುವುದು ದಾಸರು ರಚಿಸಿದ ಸ್ವರಾವಳಿ ಮತ್ತು ಗೀತೆಗಳಿಂದ. ಇವರು ರಚಿಸಿದ ಕೀರ್ತನೆಗಳು ಜನರ ಮನಗಳಲ್ಲಿ, ನುಡಿಗಳಲ್ಲಿ ಎದ್ದುಕಾಣುತ್ತದೆ. ಶ್ರೀಮನ್ನಾರಾಯಣನ ಅಂತರಂಗ ಭಕ್ತರಾಗಿ ನವಕೋಟಿ ನಾರಾಯಣ ಮಂತ್ರವನ್ನು ಜಪಿಸಿದ್ದಾರೆ.

ಪುರಂದರಗಡದಲ್ಲಿ ವರದಪ್ಪ ನಾಯಕ ಮತ್ತು ಲಕ್ಷ್ಮಕ್ಕ ದಂಪತಿಗಳಿಗೆ ಮಗನಾಗಿ ಜನಿಸಿದರು. ಇವರಿಗೆ ಶ್ರೀನಿವಾಸ ನಾಯಕನೆಂದು ನಾಮಕರಣ ಮಾಡಲಾಗಿತ್ತು. ಬೆಳೆದು ದೊಡ್ಡವನಾದ ನಂತರ ತಂದೆಯ ಚಿನಿವಾರ ವೃತ್ತಿಯನ್ನೇ ಅವರು ನಡೆಸುತ್ತಿದ್ದರು. ಸರಸ್ವತಿ ಎಂಬ ಕನ್ಯೆಯನ್ನು ವಿವಾಹವಾದರು.

ವ್ಯಾಪಾರವೇನೋ ಚೆನ್ನಾಗಿ ನಡೆಯುತ್ತಿತ್ತು, ಆದರೆ ಈತ ಬಹಳ ಜಿಪುಣಾಗ್ರೇಸಿ. ಯಾರಿಗೂ ಒಂದು ಕಿಲುಬು ಕಾಸನ್ನೂ ಕೊಡುತ್ತಿರಲಿಲ್ಲ. ಇವರಿಗೆ 'ನವಕೋಟಿ ನಾರಾಯಣ' ಎಂದೇ ಹೆಸರಾಗಿತ್ತು.

ಇವರ ಈ ವ್ಯಕ್ತಿತ್ವವನ್ನು ಪರೀಕ್ಷಿಸಲು ಒಮ್ಮೆ, ಪರಮಮಾತ್ಮಾ ಶ್ರೀಮನ್ನಾರಾಯಣ ಬ್ರಾಹ್ಮಣ ಸ್ವರೂಪಿಯಾಗಿ ಅವರ ಮನೆಗೆ ಹೋಗಿ ಅವರ ಹೆಂಡತಿಯ ಬಳಿ ದಾನ ಬೇಡುತ್ತಾರೆ. ದಾನ ನೀಡಲು ಏನೂ ಇಲ್ಲವೆಂದು ಆಕೆ ಹೇಳಿದರೂ, ಕನಿಷ್ಠ ಅವಳ ಮೂಗುತ್ತಿಯನ್ನಾದರೂ ದಾನ ಕೊಡಲು ಬೇಡಿದರು. ನಂತರ ಆ ಮೂಗುತಿಯನ್ನು ಶ್ರೀನಿವಾಸ ನಾಯಕರ ಅಂಗಡಿಯಲ್ಲೇ ಒತ್ತೆಇಟ್ಟು ಹಣ ಕೇಳಲು ಬರುತ್ತಾರೆ. ಮೂಗುತಿಯನ್ನು ಕಂಡ ನಾಯಕರು, ಆ ವಿಪ್ರನನ್ನು ಅಂಗಡಿಯಲ್ಲೇ ಕುಳ್ಳಿರಿಸಿ, ಮನೆಯತ್ತ ಹೋಗುತ್ತಾರೆ, ಆ ಮೂಗುತಿ ಹೆಂಡತಿಯದ್ದೇ ಎಂದು ಖಚಿತಪಡಿಸಲು. ಹೆಂಡತಿಯನ್ನು ತನ್ನ ಮೂಗುತಿಯ ಬಗ್ಗೆ ಕೇಳಿದಾಗ, ಗಂಡನ ಕೋಪಕ್ಕೆ ತುತ್ತಾಗಬಹುದೇನೋ ಎನ್ನುವ ಭಯದಿಂದ ವಿಷ ಕುಡಿಯಲು ಮುಂದಾಗುತ್ತಾಳೆ. ಆದರೆ ವಿಷದ ಬಟ್ಟಿಲು ಬಾಯಿಗೆ ತರುವಷ್ಟರರಲ್ಲಿ ಅದರಲ್ಲಿ ಆಕೆಯ ಮೂಗುತಿ ಕಾಣುತ್ತದೆ.

ಇದನ್ನು ಕಂಡು ಅಚ್ಚರಿಗೊಂಡ ನಾಯಕರು ಅಂಗಡಿಗೆ ಹೋಗಿ ನೋಡಿದರೆ ಆ ವಿಪ್ರನು ಇರುವುದಿಲ್ಲ. ಅಂಗಡಿಗೆ ಬಂದಿದ್ದವನು ಆ ಪರಮಾತ್ಮ ಎಂದು ತಿಳಿಯುತ್ತದೆ. ಈ ಪವಾಡವು ಅವರ ಜೀವನಕ್ಕೆ ತಿರುವು ತಂದ ಒಂದು ಘಟನೆ. ಈ ಘಟನೆ ಪರಿಣಾಮದಿಂದ ಶ್ರೀನಿವಾಸನಾಯಕರು ತಮ್ಮಲ್ಲಿದ್ದ ಐಶ್ವರ್ಯವನ್ನೆಲ್ಲಾ ಬಡಬಗ್ಗರಿಗೆಲ್ಲಾ ದಾನ ಮಾಡಿ, ವ್ಯಾಸರಾಯರ ಶಿಷ್ಯರಾದರು. ಪುರಂದರ ವಿಠಲನ ಅಪಾರ ಭಕ್ತರಾಗಿ, ಪುರಂದರದಾಸನೆನಿಸಿ ಕೊಂಡರು. ಅಸಂಖ್ಯಾತ ಕೀರ್ತನೆಗಳನ್ನು ರಚಿಸಿ ಜನ ಮನ್ನಣೆ ಪಡೆದರು. ಕರ್ನಾಟಕ ಸಂಗೀತಕ್ಕೆ ಇವರು ನೀಡಿದ ಕೊಡುಗೆ ಅಪಾರ. ಇವರು ನಾರದಾಂಶ ಸಂಭೂತರೆನಿಸಿಕೊಂಡರು. ಪುಷ್ಯ ಬಹುಳ ಅಮಾವಾಸ್ಯೆಯಂದು ಆ ಪರಮಾತ್ಮನ ಪಾದ ಸೇರಿದರು. ಆ ದಿನದಂದು, ಇಂದಿಗೂ ಪುರಂದರದಾಸರ ಆರಾಧನೆ ದೇಶದ ಹಲವೆಡೆ ವಿಜೃಂಭಣೆಯಿಂದ ನಡೆಯುತ್ತದೆ.

## ಶ್ರೀ ತ್ಯಾಗರಾಜರು (ಕ್ರಿ.ಶ. 1767-1847)


ಕರ್ನಾಟಕ ಚರಿತ್ರೆಯಲ್ಲಿ ವಾಗ್ಗೇಯಕಾರ ಸಾರ್ವಭೌಮರೆನಿಸಿಕೊಂಡ ತ್ಯಾಗರಾಜರು ಸಂಗೀತ ತ್ರಿಮೂರ್ತಿಗಳಲ್ಲಿ ಒಬ್ಬರು.

ತಮ್ಮ 5ನೇ ವಯಸ್ಸಿನಲ್ಲೇ ವಾಲ್ಮೀಕಿ ರಾಮಾಯಣದ 24 ಶ್ಲೋಕಗಳನ್ನು ಕಂಠಪಾಠ ಮಾಡಿ, ಶ್ರೀ ತ್ಯಾಗರಾಜರು ಸುಮಧುರವಾಗಿ ಹಾಡುತ್ತಿದ್ದರು. ತಂದೆ ರಾಮಬ್ರಹ್ಮರ ರಾಮಾಯಣದ ವ್ಯಾಖ್ಯಾನಕ್ಕೆ ಶ್ಲೋಕಗಳನ್ನು ಹಾಡುತ್ತಿದ್ದರಂತೆ. 96 ಕೋಟಿ ರಾಮನಾಮ ಮಂತ್ರವನ್ನು ಜಪಿಸಿ ಶ್ರೀ ರಾಮನ ಅನನ್ಯ ಭಕ್ತರಾಗಿ, ಆತನ ದರ್ಶನವನ್ನು ಅನೇಕ ಬಾರಿ ಪಡೆದವರು. ಶ್ರೀ ತ್ಯಾಗರಾಜರ ಪರಂಪರೆಯಲ್ಲೇ ಕರ್ನಾಟಕ ಸಂಗೀತವು ಸಮೃದ್ಧವಾಗಿ ಬೆಳೆದು, ಜನಮನವನ್ನು ಸೂರೆಗೊಂಡಿತು. ಅವರ ಕೃತಿಗಳು ಭಕ್ತಿಪ್ರಧಾನವಾಗಿಯೂ, ತತ್ವಗಳು, ನೀತಿಗಳನ್ನು, ಪುರಾಣಗಳ ಸತ್ವವನ್ನು ಒಳಗೊಂಡಿದೆ.

ತಿರುವಾರೂರಿನಲ್ಲಿ ರಾಮಬ್ರಹ್ಮ ಮತ್ತು ಸೀತಮ್ಮ ದಂಪತಿಗಳಿಗೆ ಕಾಕರ್ಲ ತ್ಯಾಗಬ್ರಹ್ಮಮ್ ಎಂಬ ಹೆಸರಿನಿಂದ, ವರಪುತ್ರರಾಗಿ ಜನಿಸಿದರು. ಬಾಲ್ಯದಲ್ಲಿಯೇ ಸಂಗೀತ, ಸಾಹಿತ್ಯ, ವೇದ, ಪುರಾಣ, ಉಪನಿಷತ್ತು, ಅಲಂಕಾರ ಶಾಸ್ತ್ರಗಳ ಅಧ್ಯಯನ ಮಾಡಿ ಸೊಂಠಿ ವೆಂಕಟರಮಣ ಭಾಗವತರ ಶಿಷ್ಯರಾದರು. ತಮ್ಮ ಎಂಟನೆಯ ವಯಸ್ಸಿನಲ್ಲೇ ಶಿಷ್ಯವೃತ್ತಿಯನ್ನು ಆರಂಭಿಸಿದರು. ಎರಡು ವರ್ಷಗಳ ಕಾಲದಲ್ಲೇ ಸಂಗೀತದಲ್ಲಿ ಪಾರಂಗತರಾದರು. ಅವರ ಸಂಗೀತದ ಮೇಲಿನ ಆಸಕ್ತಿ, ವೇಗವಾಗಿ ಗಳಿಸಿದ ಪಾಂಡಿತ್ಯ ಹಾಗೂ ಗುರುಭಕ್ತಿಯನ್ನು ಕಂಡು ಅವರ ಗುರುಗಳು ಹೆಮ್ಮೆಯಿಂದ, "ಇಂಥ ಒಳ್ಳೆಯ ಶಿಷ್ಯ ಯಾರಿಗೂ ದೊರಕನು" ಎಂದು ಸಭಿಕರ ಮುಂದೆ ತ್ಯಾಗರಾಜರನ್ನು ಹೊಗಳುತ್ತಿದ್ದರಂತೆ! ಮುಂದೆ ರಾಮ ಕೃಷ್ಣಾನಂದ ಯತಿಗಳಿಂದ ತಾರಕನಾಮ ಉಪದೇಶವಾಯ್ತು. ಶ್ರೀರಾಮಚಂದ್ರ ಪ್ರಭುವು ಅವರ ಸರ್ವಸ್ವವಾದನು. ಶಾಂತಮ್ಮ ಎಂಬ ಕನ್ಯೆಯೊಡನೆ ಇವರ ವಿವಾಹ ವಾಯ್ತು. ಕೆಲಕಾಲದಲ್ಲೇ ಸೀತಾಲಕ್ಷ್ಮೀ ಎಂಬ ಹೆಣ್ಣು ಮಗುವನ್ನು ಪಡೆದರು.

ಮುಂದೆ ಅನೇಕ ಶಿಷ್ಯರಿಗೆ ತರಬೇತಿ ನೀಡಿ ತಮ್ಮ ಸಂಗೀತ ರಚನೆಯ ಉಳಿಯುವಿಕೆಗೆ ದಾರಿ ಮಾಡಿದರು. ತಮ್ಮ 80ನೆಯ ವಯಸ್ಸಿನಲ್ಲಿ ಪುಷ್ಯ ಶುದ್ಧ ಪಂಚಮಿಯಂದು ಶ್ರೀರಾಮನ ಪಾದ ಸೇರಿ, ನಾದ ಬ್ರಹ್ಮಾನಂದರಾಗಿ, ನಾದ ಯೋಗಿಗಳೆನಿಸಿಕೊಂಡರು. ಇಂದಿಗೂ ಶ್ರೀ ತ್ಯಾಗರಾಜರ ಆರಾಧನೆಯನ್ನು ತಿರುವಯ್ಯಾರಿನಲ್ಲಿ ವಿಜೃಂಭಣೆಯಿಂದ ಆಚರಿಸಲಾಗುತ್ತಿದೆ. ದೇಶದ ಎಲ್ಲಾ ಮೂಲೆಗಳಲ್ಲೂ ತ್ಯಾಗರಾಜರ ಆರಾಧನೆಯನ್ನು ಬಹಳ ವೈಭವವಾಗಿ ಆಚರಿಸುತ್ತಾರೆ.

ತ್ಯಾಗರಾಜ ಎಂಬ ಅಂಕಿತದೊಡನೆ ತಮ್ಮ 10ನೇ ವಯಸ್ಸಿನಲ್ಲೇ, ಮುಖ್ಯವಾಗಿ ತೆಲುಗು ಭಾಷೆಯಲ್ಲಿ ಅನೇಕ ಕೃತಿಗಳನ್ನು ರಚಿಸಿದ್ದಾರೆ. ನೌಕಾಚರಿತ್ರೆ, ಪ್ರಹ್ಲಾದ ವಿಜಯ, ಸೀತಾರಾಮ ವಿಜಯ ಎಂಬ ನಾಟಕಗಳನ್ನು ರಚಿಸಿದ್ದಾರೆ. ಕೆಲವು ಸಮುದಾಯ ಕೃತಿಗಳನ್ನು ರಚಿಸಿದ್ದಾರೆ, ಪಂಚರತ್ನ ಕೃತಿಗಳನ್ನು ರಚಿಸಿದ್ದಾರೆ. ಇಂದಿಗೂ ತ್ಯಾಗರಾಜರು ತಮ್ಮ ರಚನೆಗಳಿಂದ ನಮ್ಮೆಲ್ಲರ ಮನದಲ್ಲಿದ್ದರೆ. ಅಂತಹ ಮಹಾನ್ ರಚನಾಕಾರರಿಗೆ ನನ್ನ ವಂದನೆಗಳು.



**ಶಾಂತ ಕೆ ಎಲ್**

# ಯುವ ಪ್ರತಿಭೆ

**ಡಾ. ಎಸ್. ಪ್ರವೀಣ್ ಕುಮಾರ್,** ಎಂ.ಬಿ.ಬಿ.ಎಸ್., ಡಿ.ಎಂ. (ನ್ಯೂರಾಲಜಿ)

ರಾಜ್ಯದ ಪ್ರತಿಷ್ಠಿತ ವಿಖ್ಯಾತ ವಿಕ್ಟೋರಿಯಾ ಆಸ್ಪತ್ರೆಯ ಹಾಗೂ ಬೆಂಗಳೂರು ವೈದ್ಯಕೀಯ ಕಾಲೇಜಿನಲ್ಲಿ ನರರೋಗ ವಿಭಾಗದಲ್ಲಿ ಪ್ರಾಧ್ಯಾಪಕರಾಗಿ ಸೇವೆಸಲ್ಲಿಸುತ್ತಿರುವ ಡಾ. ಎಸ್. ಪ್ರವೀಣ್‌ಕುಮಾರ್‌ರವರು ನಮ್ಮ ಸಂಘದ ಪೋಷಕರಾದ ಶ್ರೀಮತಿ ಎಸ್. ಪದ್ಮಾವತಿ ಮತ್ತು ಕೆ. ಶ್ರೀಕಂಠೇಶ್ವರ್ ದಂಪತಿಗಳ ಪುತ್ರರು. 1978ರ ಡಿಸೆಂಬರ್‌ನಲ್ಲಿ ಜನಿಸಿದ ಇವರು ಇಟ್ಟಂಗೂರು ವಂಶಕ್ಕೆ ಸೇರಿದ ಕಪಿಲಸ ಗೋತ್ರ ಸಂಜಾತರು. ಶಾಲಾ ಶಿಕ್ಷಣ ಹಂತದಿಂದ ಪದವಿಪೂರ್ವ ಶಿಕ್ಷಣದವರೆಗೆ ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾದವರು. ತಮ್ಮ ಎಂ.ಬಿ.ಬಿ.ಎಸ್. ಶಿಕ್ಷಣವನ್ನು ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಮೂರು ಚಿನ್ನದ ಪದಕಗಳೊಂದಿಗೆ 2002ರಲ್ಲಿ ಪೂರೈಸಿದ ಶ್ರೀಯುತರು ಅಖಿಲ ಭಾರತ ಸ್ಪರ್ಧಾ ಪರೀಕ್ಷೆಯ ಮೂಲಕ ತಮ್ಮ ಡಿ.ಎಂ. ಪದವಿಯನ್ನು ಪ್ರತಿಷ್ಠಿತ ನಿಮ್ಹಾನ್ಸ್ ವಿಶ್ವವಿದ್ಯಾಲಯದಲ್ಲಿ 2009ರಲ್ಲಿ ಪೂರೈಸಿದರು. ಪ್ರಾರಂಭಿಕವಾಗಿ ನಿಮ್ಹಾನ್ಸ್‌ನಲ್ಲಿ ಸೀನಿಯರ್ ರೆಸಿಡೆಂಟ್ ಆಗಿ ವೃತ್ತಿ ಜೀವನ ಪ್ರಾರಂಭಿಸಿದ ಡಾ. ಪ್ರವೀಣ್‌ರವರು 2010ರಲ್ಲಿ ಬೆಂಗಳೂರು ವೈದ್ಯಕೀಯ ಕಾಲೇಜಿನಲ್ಲಿ ನರರೋಗ ವಿಭಾಗದಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಆಯ್ಕೆಯಾದರು.

2016ರಲ್ಲಿ ಪ್ರಾಧ್ಯಾಪಕರಾಗಿ ಪದೋನ್ನತಿ ಪಡೆದ ಶ್ರೀಯುತರು 2016ನೇ ಸೆಪ್ಟೆಂಬರ್‌ನಿಂದ ನರರೋಗ ವಿಜ್ಞಾನ ವಿಭಾಗದ ಮುಖ್ಯಸ್ಥರಾಗಿ ನಿಯುಕ್ತಿಗೊಂಡರು. ವೃತ್ತಿ ನೈಪುಣ್ಯತೆಯನ್ನು ವಿಸ್ತರಿಸಿಕೊಳ್ಳಲು ಇವರು ರೂಪಿಸಿದ ವಿದ್ವತ್ಪೂರ್ಣ ಸಂಶೋಧನಾ ಲೇಖನಗಳು ಅಂತರಾಷ್ಟ್ರೀಯ ಮತ್ತು ರಾಷ್ಟ್ರೀಯ ಮ್ಯಾಗಜಿನ್‌ಗಳಲ್ಲಿ ಪ್ರಕಟವಾಗಿದೆ.

ಇವರು ಕಿರಿಯ ವಯಸ್ಸಿನಲ್ಲಿಯೇ ಹಲವಾರು ಪ್ರಶಸ್ತಿಗಳನ್ನು ಪಡೆದಿದ್ದು ಅದರಲ್ಲಿ ಪ್ರತಿಷ್ಠಿತ Indian Academy of Neurology Award for Best Research Paperನ್ನು 2006ರಲ್ಲಿ, Neurology Young Scholar Awardನ್ನು 2010ರಲ್ಲಿ ಪಡೆದಿರುತ್ತಾರೆ.

2017ರಲ್ಲಿ Indian Association of Physiciansನ ಕರ್ನಾಟಕ ಶಾಖೆಯ ವತಿಯಿಂದ Young Scientist Awardನ್ನು ಸಹಾ ಪಡೆದಿರುತ್ತಾರೆ. ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಮಾರ್ಗದರ್ಶಕರಾಗಿಯೂ ಕಾರ್ಯನಿರ್ವಹಿಸುತ್ತಿರುವ ಡಾ. ಪ್ರವೀಣ್ ಕುಮಾರ್‌ರವರು ತಮ್ಮ ಅಧ್ಯಾಪನದ ಜೊತೆಗೆ ಬೆಂಗಳೂರಿನ ಹಲವಾರು ಆಸ್ಪತ್ರೆಗಳಲ್ಲಿ ಸಮಾಲೋಚಕರಾಗಿಯೂ ಸೇವೆ ಸಲ್ಲಿಸುತ್ತಿದ್ದಾರೆ. ಬಹಳಷ್ಟು ಬೃಹಚ್ಚರಣ ಬಂಧುಗಳು ಇವರಿಂದ ವೈದ್ಯಕೀಯ ನೆರವು ಪಡೆದಿದ್ದು ಶ್ರೀಯುತರು ನಮ್ಮ ಸಂಘದ ಸಕ್ರಿಯ ಸದಸ್ಯರಾಗಿರುವುದು ನಮಗೆ ಹೆಮ್ಮೆಯ ವಿಷಯ. ಬಹುಮುಖ ಪ್ರತಿಭೆಯ ಶ್ರೀಯುತರ ತಜ್ಞ ಸೇವೆ ಹೀಗೇ ಮುಂದುವರೆಯಲಿ.

### ಅಭಿನಂದನೆ

ಸಂಘದ ಹಿರಿಯ ಸದಸ್ಯರಾದ ಶ್ರೀ ಜಿ.ಎಸ್. ವೇಣುಗೋಪಾಲ್‌ರವರಿಗೆ 70 ವರ್ಷ ತುಂಬಿದ ಪ್ರಯುಕ್ತ ಭೀಮರಥ ಶಾಂತಿ ಸಮಾರಂಭವು ಏರ್ಪಡಿಸಲಾಗಿತ್ತು. ಶ್ರೀಯುತರಿಗೆ ಆರೋಗ್ಯ, ನೆಮ್ಮದಿ ದೇವರು ದಯಪಾಲಿಸಲೆಂದು ಸಂಘ ಹಾರೈಸುತ್ತದೆ.



**ಡಾ. ಆರ್.ವೈ. ಕಲ್ಪನಾ,** ಎಂ.ಬಿ.ಬಿ.ಎಸ್., ಡಿ.ಸಿ.ಎಚ್., ಡಿ.ಎನ್.ಬಿ.

ಡಾ. ಕಲ್ಪನಾರವರು ಖ್ಯಾತ ನರರೋಗ ತಜ್ಞ ಡಾ. ಪ್ರವೀಣ್ ಕುಮಾರ್‌ರವರ ಪತ್ನಿ.

1981ರಲ್ಲಿ ಗುಲಬರ್ಗಾದಲ್ಲಿ ಜನಿಸಿದ ಡಾ. ಕಲ್ಪನಾ ಗುಲಬರ್ಗಾದ ಹೆಸರಾಂತ ಮಕ್ಕಳ ತಜ್ಞರಾದ ಡಾ. ರಮೇಶ್‌ಯಲ ಸಂಗೀಕರ್ ಹಾಗೂ ಶ್ರೀಮತಿ ರೋಹಿಣಿಯವರ ದ್ವಿತೀಯ ಪುತ್ರಿ. ಕಲಬುರ್ಗಿಯ ಶ್ರೀ ಮಹದೇವಪ್ಪ ರಾಂಪುರೆ ವೈದ್ಯಕೀಯ ಕಾಲೇಜಿನಲ್ಲಿ ತಮ್ಮ ವೈದ್ಯ ಶಿಕ್ಷಣವನ್ನು ಪೂರೈಸಿ ಬಳ್ಳಾರಿಯ ವಿಜಯನಗರ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್‌ನಲ್ಲಿ ಡಿ.ಸಿ.ಎಚ್. ಸ್ನಾತಕೋತ್ತರ ಶಿಕ್ಷಣವನ್ನು 2008ರಲ್ಲಿ ಪೂರೈಸಿ, 2009–2011ರ ಅವಧಿಯಲ್ಲಿ ಪ್ರತಿಷ್ಠಿತ ನಾರಾಯಣ ಹೃದಯಾಲಯದಿಂದ ಡಿ.ಎನ್.ಬಿ. ಪದವಿ ಪೂರೈಸಿದ ಶ್ರೀಮತಿಯವರು 2015–16ರಲ್ಲಿ ಫೆಲೋಷಿಪ್ ಇನ್ ನ್ಯೂರಾಲಜಿಯನ್ನು ಪಡೆದಿರುತ್ತಾರೆ. ಶಿಶುರೋಗ ತಜ್ಞೆಯಾದ ಶ್ರೀಮತಿಯವರು ಸದಾ ಕಾರ್ಯ ತತ್ಪರರಾಗಿರುತ್ತಾರೆ. ಶ್ರೀಮತಿ ಕಲ್ಪನಾರವರು ವಿಶೇಷವಾಗಿ ವಿಶೇಷ ನಿಗಾ ಘಟಕದಲ್ಲಿ ಕಾರ್ಯನಿರ್ವಹಿಸುವ ತರಬೇತಿ ಹೊಂದಿದ್ದು, ತಮ್ಮ ಅತೀವ ಕಾಳಜಿ ಹಾಗೂ ನಿಸ್ವಾರ್ಥ ಸೇವಾ ಪ್ರಾಮಾಣಿಕತೆಯಿಂದ ಹಲವಾರು ರೋಗಿಗಳು ಪುನರ್ಜನ್ಮ ಪಡೆದದಂತಾಗಿರುವ ನಿದರ್ಶನಗಳಿವೆ. ಪ್ರಾರಂಭಿಕ ಹಂತದಲ್ಲಿ ಕೆಲವು ಖಾಸಗಿ ಆಸ್ಪತ್ರೆಗಳಲ್ಲಿ ಸೇವೆ ಸಲ್ಲಿಸಿದ್ದು, ಪ್ರಸ್ತುತ ವಾಣೀವಿಲಾಸ ಆಸ್ಪತ್ರೆಯಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಸೇವೆಸಲ್ಲಿಸುತ್ತಿದ್ದಾರೆ. ಶಿಶು ವೈದ್ಯಕೀಯ ವಿಭಾಗದಲ್ಲಿ ಸೇವೆ ಸಲ್ಲಿಸುತ್ತಿರುವ ಶ್ರೀಮತಿ ಕಲ್ಪನಾರವರು 2007ರಲ್ಲಿ ಡಾ. ಪ್ರವೀಣ್‌ಕುಮಾರ್‌ರವರನ್ನು ವಿವಾಹವಾಗಿದ್ದು, ಕು. ಆಭಾ 2015ರಲ್ಲಿ ಪ್ರವೇಶಿಸಿದ್ದಾಳೆ. ಈ ದಂಪತಿಗಳ ವೈದ್ಯ ವೃತ್ತಿ ಸೇವೆ ಹೀಗೇ ಮುಂದುವರೆಯಲಿ ಎಂದು ಆಶಿಸೋಣ.



ಎಸ್. ಸಿ. ಶ್ರೀನಿವಾಸ್
9845376949

# ಮಂಕುತಿಮ್ಮನ ಕಗ್ಗ

**ಕಗ್ಗ ತಾತ್ಪರ್ಯ**

ಗುಣಗುಣಿಸಿ ತಿಣುಕುತ್ತ ಹೆಣಗಾಡಿ ಫಲವೇನು ?
ಗಣನೆಗೆಟುಕದದೊಂದ ಚಿಂತ್ಯವೆತ್ತಲೋ ತಾನ್
ಅಣಗಿದ್ದು ನಿನ್ನೆಲ್ಲ ಗಣಿತಗಳನಣಕಿವುದು
ದಣಿಯದಾ ವಿಧಿ ವಿಕಟ – ಮಂಕುತಿಮ್ಮ !!

ಪೂಜ್ಯ ಶ್ರೀ ಡಿ.ವಿ.ಜಿ. ಅವರು ಈ ಮುಕ್ತಕದಲ್ಲಿ ನಮ್ಮ ಜೀವನದಲ್ಲಿ ದೈವದ ಪಾತ್ರ ಏನು ಎಂಬುದನ್ನು ಚಿತ್ರಿಸಿದ್ದಾರೆ.

ನಮ್ಮ ಜೀವನದಲ್ಲಿ ಬರುವ ಆಗುಹೋಗುಗಳನ್ನು ಚಿಂತಿಸುತ್ತಾ ಇದರ ಬಗ್ಗೆ ಊಹಾಪೋಹದಿಂದ ಲೆಕ್ಕಾಚಾರ ಹಾಕಿ ಹೆಣಗಾಡಿ ತಿಣುಕಾಡಿ ತಿಪ್ಪರ ಲಾಗ ಹಾಕಿದರೂ, ಏನು ಪ್ರಯೋಜನ? ಏನು ಫಲ? ನಮಗೆ ಎಟುಕದ (ಅಪ್ರಾಪ್ತ ಮನಸಾ ಸಹ) ನಮ್ಮನ್ನು ಮೀರಿದ ಒಂದು ಅಪರಿಮಿತ ಅಚಿಂತ್ಯ ಶಕ್ತಿ ಪರೋಕ್ಷವಾಗಿ ನಮ್ಮ ಎಲ್ಲಾ ಗುಣಾಕಾರಗಳನ್ನು ತಲೆಕೆಳಗುಮಾಡುತ್ತದೆ. ಅಣಕಿಸುತ್ತದೆ. ಇದು ವಿಧಿಯ ವಿಕಟ ಅಟ್ಟಹಾಸ ಎಂದು ಬದುಕಿನಲ್ಲಿ ವಿಧಿಯಾಟದ ಪ್ರಸ್ತಾಪ ಮಾಡಿದ್ದಾರೆ.

'ದೈವಭಾಗ' ಎಂಬ ಶೀರ್ಷಿಕೆಯಿರುವ ಈ ಮುಕ್ತಕಗಳಲ್ಲಿ 'ಸರ್ವಾಧಿಕೃತೆ' ಯನ್ನು ವಿವರಿಸಿದ್ದಾರೆ. ದೈವ ಎಂಬುದಕ್ಕೆ ಭಗವಂತ, ಪರಮಾತ್ಮ, ಅಚಿಂತ್ಯ, ಅತೀತಶಕ್ತಿ, ವಿಧಿ... ಹೀಗೆ ಅನೇಕ ಅರ್ಥಗಳಿವೆ. ಈ ಮುಕ್ತಕದಲ್ಲಿ ಪರಮಾತ್ಮನೇ ಸೂತ್ರಧಾರ – ನಾವೆಲ್ಲರೂ ಪಾತ್ರಧಾರಿಗಳು ಎಂದು ತಿಳಿಸಿದ್ದಾರೆ. ಆದುದರಿಂದ ಲೋಕದಲ್ಲಿ ಎಲ್ಲವನ್ನೂ ಸಾಧಿಸುತ್ತೇನೆ ಎನ್ನುವುದು ಭ್ರಮೆ. ಏಕೆಂದರೆ ಅದಕ್ಕೆ ಬೇಕಾದ ಎಲ್ಲಾ ಗುಣಶಕ್ತಿಗಳು ನಿನ್ನಲ್ಲಿಲ್ಲ. 'ಮಿತ ನಿನ್ನ ಗುಣಶಕ್ತಿ'. ನಿನ್ನ ಕಾರ್ಯತತ್ಪರತೆಯೂ ಮಿತವಾಗಿರಲಿ. ಯಾವುದು ಮಿತ, ಯಾವುದು ಅತಿ ಎಂಬ ಅಂತರವನ್ನು ತಿಳಿಯಲು ನಾವು ಬಹಳ ಕಷ್ಟಪಡಬೇಕು. ಆದುದರಿಂದ ನಿನಗೆ ಹಿತವೆನಿಸುವ ಕಾರ್ಯವನ್ನು ನಿನ್ನ ಕೈಲಾಗುವಷ್ಟು ಮಾಡಿ ಮಿಕ್ಕುದ್ದನ್ನು ದೈವಕ್ಕೆ ಬಿಡು. ಆ ದೈವಕ್ಕೂ ಕೆಲಸವಿರಲಿ. 'ಕೃತಿಯಿರಲಿ ದೈವಕಂ'. ಎಷ್ಟೋ ವಿಷಯಗಳು ದೈವದ ಅಧೀನದಲ್ಲಿರುತ್ತವೆ.

ಭಗವದ್ಗೀತೆಯಲ್ಲಿ 'ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ' ಎನ್ನುವಂತೆ ನಮ್ಮ ಕರ್ತವ್ಯವನ್ನು ನಾವು ಮಾಡಿ ಫಲಾಫಲಗಳನ್ನು ನಿರೀಕ್ಷೆ ಮಾಡದೇ ದೈವಕ್ಕೆ ಬಿಡಬೇಕು ಎನ್ನುವಂಥ ನಿರ್ಧಾರದ ಮಾತನ್ನು ಡಾ. ಡಿ.ವಿ.ಜಿ ಅವರು ತಿಳಿಸಿದ್ದಾರೆ. ಮುಂದಿನ ಮುಕ್ತಕ ಹೀಗಿದೆ. ನಮ್ಮ ಜೀವನ ಸಾಗಬೇಕಾದರೆ, ಅನೇಕ ಭಾವನೆಗಳು ವಾಸನೆಗಳು ಎಂಬ ಅನೇಕ ಸಾಮಗ್ರಿಗಳು ನಮ್ಮ ಅಂತರಂಗದಲ್ಲಿ ಬಂದು ನೆಲೆಸುತ್ತವೆ. "ಹೇಳಲಾಗದ ಹಸಿವು ತಾಳಲಾಗದ ತಪನ". ಹೊಟ್ಟೆ ಹಸಿವಾದರೆ ಹೇಳಬಹುದು. ಉಣ್ಣಬಹುದು. ಆದರೆ ಹೇಳಿಕೊಳ್ಳಲಾಗದ ಹಸಿವು, ಉದಾಹರಣೆಗೆ ಹೆಣ್ಣು, ಸೇಡು, ಸಂಪತ್ತು, ಅಧಿಕಾರ ಯಾವುದೇ ದಾಹವಾದರೂ, ಅದು ತಾಪ ಕೊಡುವಂತಾದ್ದು. ಇದನ್ನು ಹೇಳಲು ನಾಚಿಕೆ ಮತ್ತು ಸಹಿಸಲಸಾಧ್ಯವಾದ ಚಿಂತೆಮೂಟೆ. ಈ ಚಿಂತನೆಗಳು ಎಲ್ಲಿಂದಲೋ ಬರುವ ಸಂದರ್ಭಗಳಿಂದ ಪ್ರಚೋದಿಸುತ್ತವೆ. ಹೀಗಿರುವಾಗ, ನಮ್ಮ ಬಾಳು ಸುಗಮವಾಗಿರಬೇಕಾದರೆ, ಜೀವನ ಹಿತವಾಗಿರಬೇಕಾದರೆ, ಇಹ ಲೋಕದ ಭೋಗಭಾಗ್ಯಗಳನ್ನು ಮಿತವಾಗಿ ಅನುಭವಿಸಿ ಸುಖಾನ್ವೇಷಣೆಯಲ್ಲಿ ನಮ್ಮ ಭವಿಷ್ಯದ ಸದ್ಗತಿಯನ್ನು ಕೆಡಿಸಿಕೊಳ್ಳದಿರಬೇಕು. ನಾವು ಗಗನಕುಸುಮಕ್ಕೆ ಕೈ ಹಾಕದೇ ಇದ್ದುದರಲ್ಲೇ ತೃಪ್ತಿಯಿಂದ ಬಾಳಿ ಅದನ್ನೇ ಆ ಭಗವಂತನಿಗೆ ಅರ್ಪಿಸಿ, ಕೃಷ್ಣಾರ್ಪಣ ಎನ್ನುವಂತಾಗಬೇಕು. ಮುಂದಿನ ಮುಕ್ತಕದಲ್ಲಿ ಆ ಪರಮಾತ್ಮನು ಇರುವು ದಾದರೂ ಎಲ್ಲಿ ಎಂದು ಪ್ರಶ್ನಿಸಿದ್ದಾರೆ. ನಮ್ಮ ಶರೀರದಲ್ಲಿ ಆತ್ಮ ಸ್ವರೂಪನಾಗಿದ್ದಾನೆ ಎನ್ನುವುದು ಸರ್ವ ವಿದಿತವಾದ ವಿಷಯ. ಪರಮಾತ್ಮನ ವಾಸ ಹೃದಯದೊಳಗೋ, ಮನಸ್ಸಿನೊಳಗೋ, ಭ್ರೂಮಧ್ಯದೊಳಗೋ ಎಂದು ಅನೇಕರು ತರ್ಕ ಮಾಡಿದ್ದಾರೆ. ಆದರೆ ನಮ್ಮ ಪೂಜ್ಯ ಡಿ.ವಿ.ಜಿ. ಅವರು ಪರಮಾತ್ಮನ ವಾಸ ಉದರದಲ್ಲಿ ಎಂದು ಹೇಳಿದ್ದಾರೆ. "ಉದರದಾತ್ಮ ನಿವಾಸ".



"ತಂಡುಲದ ಹಿಡಿಯೊಂದು ತುಂಡು ಬಟ್ಟೆಯದೊಂದು" ಎನ್ನುವಂತೆ ನಮ್ಮ ಜೀವನ "ಹಿಡಿ ಅನ್ನಕ್ಕಾಗಿ ಗೇಣು ಬಟ್ಟೆಗಾಗಿ" ಹೋರಾಡುವಂತಾಗಿದೆ. ನಮ್ಮ ಪೂರ್ವಿಕರು ಊಟವನ್ನು ಒಂದು ಯಜ್ಞಕ್ಕೆ ಹೋಲಿಸಿದ್ದಾರೆ. ನಮ್ಮ ಜಠರದಲ್ಲಿ ಕುಳಿದ ಆ ವೈಶ್ವಾನರನಿಗೆ ಎಲ್ಲಾ ಅರ್ಪಣೆ. ಆ ವೈಶ್ವಾನರ ರೂಪಿ ಪರಮಾತ್ಮನೇ ನಮ್ಮನ್ನು ಹೊಟ್ಟೆಗಾಗಿ ದುಡಿಯುವಂತೆ ಮಾಡಿದ್ದಾನೆ. "ಆ ಧಣಿಗೆ ಬಹಳ ದೃಷ್ಟಿ" ಎನ್ನುತ್ತಾರೆ ಮಾನ್ಯ ತಿಮ್ಮಗುರು. ಅವನು ಬಹಳ ನಿಷ್ಠುರ. ಕೆಲಸ ಮಾಡಿಸುವ ವಿಷಯದಲ್ಲಿ ಬಹಳ ಕಟ್ಟುನಿಟ್ಟಾದವ ಆ ಧಣಿ. ಲೌಕಿಕ ಜೀವನದಲ್ಲಿ ಯಜಮಾನನ ಕಣ್ಣು ತಪ್ಪಿಸಬಹುದು. ಆದರೆ ನಮ್ಮ ಶರೀರದಲ್ಲಿ ಚೈತನ್ಯ ಸ್ವರೂಪನಾಗಿದ್ದು, ನಮ್ಮನ್ನು ಕಾಯುವ, ಕಾಪಾಡುವ ಆ ಪರಮಾತ್ಮನ ದೃಷ್ಟಿ ತಪ್ಪಿಸಲು ಸಾಧ್ಯವೇ? ಈ ಅತಿಮಾನವ ಶಕ್ತಿಗೆ ಇನ್ನೊಂದು ದೃಷ್ಟಾಂತ ಕೊಟ್ಟಿದ್ದಾರೆ. ಏನಾದರೇನು? ಏನು ಮಾಡಿದರೇನು? ಎಲ್ಲಿ ಹೋದರೇನು? ನಮ್ಮ ಪ್ರಾಣ ಕಾಪಾಡಿಕೊಳ್ಳಲು, ನಮ್ಮ ಮಾನ ರಕ್ಷಿಸಿಕೊಳ್ಳಲು ಮತ್ತು ನಮ್ಮ ಅಭ್ಯುದಯ ಅಥವಾ ಪ್ರಗತಿ ಎಲ್ಲವೂ ಮಾನವಾತೀತವಾದ ಅವನ ಪ್ರಭಾವ ದಿಂದಲೇ ಇದೆ. 'ತೃಣಮಪಿ ನ ಚಲತಿ'. ಅವನ ಇಚ್ಛೆಯಿಲ್ಲದೆ ಒಂದು ಹುಲ್ಲು ಕಡ್ಡಿಯೂ ಅಲ್ಲಾಡುವುದಿಲ್ಲ. ಆದುದರಿಂದ ಆ ಶಕ್ತಿಯನ್ನು ಧ್ಯಾನ ಮಾಡೋಣ. "ಜಾನಿಸಿದನಾವಗಂ". "ಮಾನ ನಿನ್ನದು ಭಕುತ ಜನಪವಾದ ನಿನ್ನದು. ಹಾನಿವೃದ್ಧಿಗಳೆಲ್ಲಾ ನಿನ್ನದು. ಬೇರೆ ಗತಿಯುಂಟೇ" ಎಂದು ಶರಣಾಗೋಣ.

ಈ ಪ್ರಪಂಚ ಅವನ ಸೃಷ್ಟಿ. ಅವನೇ ಈಶ್ವರ. ಒಡೆಯ. ಇದು ದೈವಲೀಲೆ. ಏಕಪಕ್ಷದ ಲೀಲೆ ಎಂದು ಅವನ ಸಾರ್ವಭೌಮತ್ವವನ್ನು ಶ್ಲಾಘಿಸಿದ್ದಾರೆ. ಆದುದರಿಂದ ನಮ್ಮ ಜೀವನದ ಪರದಾಟದಲ್ಲಿ ಎಷ್ಟೇ ಲೆಕ್ಕ ಹಾಕಿದರೂ, ಯಾವುದೋ ಒಂದು ವಿಶಿಷ್ಟ ಶಕ್ತಿ ನಮ್ಮ ಲೆಕ್ಕಾಚಾರಗಳನ್ನೆಲ್ಲಾ ತಲೆಕೆಳಗು ಮಾಡಿ ನಮ್ಮನ್ನು ಅಣಕಿಸುತ್ತದೆ. ಇದೇ ವಿಧಿಯ ವಿಕಟ ಅಟ್ಟಹಾಸ. ಏಕೆಂದರೆ ವಿಧಿಯ ಕೈ ಬಲಿಷ್ಠವಲ್ಲವೇ?


**ಶ್ರೀಮತಿ ಜಿ.ಪಿ. ಲಕ್ಷ್ಮಿದೇವಿ**
**080 23444798**


*If un Delivered please return to :*
*President*
**'Bruhacharana Sangha'** No. 8, 3rd Cross, Annaiyyappa Block,
Kumarapark West, Bengaluru-560 020.

Book-Post

To,


Published by Sri S. Somasundara, President, 'BRUHACHARANA SANGHA' No. 8, 3rd Cross, Annaiyyappa Block, Kumarapark West, Bengaluru-560 020.
Printed at **Keerthi Printers,** Omkara, 240-F, 2nd D Cross, 2nd 'B' Main, Girinagar 1st Phase, Bengaluru - 560 085, 080-26722034